ಸಂಪುಟ 01 । ಸಂಚಿಕೆ 207 । ಮಂಗಳವಾರ 23 ಜೂನ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ಒಲಿಂಪಿಕ್ ದಿನ**

1894 ರಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (IOC) ಸ್ಥಾಪನೆಯಾದ ನೆನಪಿಗಾಗಿ ಈ ದಿನವನ್ನು ಜಾಗತಿಕವಾಗಿ ಆಚರಿಸಲಾಗುತ್ತದೆ. ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

**2) ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನ**

ಸಮಾಜಕ್ಕೆ ಸಾರ್ವಜನಿಕ ನೌಕರರು ನೀಡುವ ಕೊಡುಗೆಯನ್ನು ಗುರುತಿಸಲು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**3) ಅಂತರರಾಷ್ಟ್ರೀಯ ವಿಧವೆಯರ ದಿನ**

ವಿಧವೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅವರ ಹಕ್ಕುಗಳನ್ನು ಬೆಂಬಲಿಸಲು ವಿಶ್ವಸಂಸ್ಥೆಯು ಈ ದಿನವನ್ನು ನಿಗದಿಪಡಿಸಿದೆ.

## ಸುಭಾಷಿತ

"ಯಶಸ್ವಿ ಜೀವನಕ್ಕೆ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳು ಮೂಲಮಂತ್ರ."

ಡಾ॥ ಬಿ ಆರ್ ಅಂಬೇಡ್ಕರ್

## ಬಿಡದಿ ಟೌನ್‌ಶಿಪ್‌ಗೆ ಮರುಜೀವ ನೀಡಿದ್ದೇ ಕಾಂಗ್ರೆಸ್: ಹೆಚ್ಡಿಕೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕಳೆದ 2007ರಲ್ಲೇ ಸ್ಥಗಿತಗೊಳಿಸಲಾಗಿದ್ದ ಬಿಡದಿ ಟೌನ್‌ಶಿಪ್ ಯೋಜನೆಗೆ ಮರುಜೀವ ನೀಡಿ 2025ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು ಕಾಂಗ್ರೆಸ್ ಸರ್ಕಾರ ಎಂದು ಕೇಂದ್ರದ ಬೃಹತ್ ಕೈಗಾರಿಕಾ ಹಾಗೂ ಉಕ್ಕು ಕಾರ್ಖಾನೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.**

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಯೋಜನೆಗೆ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಧರ್ಮಸಿಂಗ್, ಡಿ.ಕೆ.ಶಿವಕುಮಾರ್ ಅವರು 2007ರ ಜುಲೈನಲ್ಲಿ ನಡೆದ ವಿಧಾನಸಭೆ ಕಲಾಪದಲ್ಲಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ನಾನು ರೈತರನ್ನು ಒಕ್ಕಲೆಬ್ಬಿಸಿ ಟೌನ್‌ಶಿಪ್ ಮಾಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು ಎಂದರು.

ಆದರೆ 2025ರಲ್ಲಿ ಬಿಡದಿ ಟೌನ್‌ಶಿಪ್‌ಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿ 2026ರಲ್ಲಿ ಅಂತಿಮ ಅಧಿಸೂಚನೆಯನ್ನು ಕಾಂಗ್ರೆಸ್ ಸರ್ಕಾರ ಹೊರಡಿಸಿದೆ. ರೈತರ ಪರವಾಗಿ ಡಿನೋಟಿಫಿಕೇಷನ್ ಮಾಡಿದರೆ ಜೈಲಿಗೆ ಹೋಗಬೇಕಾಗಿಲ್ಲ. ಯೋಜನೆಯನ್ನೇ ಕೈಬಿಟ್ಟು ರೈತರ ಹಿತ ಕಾಪಾಡಬಹುದು ಎಂದು ಹೇಳಿದರು.



ಅತ್ಯಂತ ವೇಗವಾಗಿ ಸರ್ಕಾರದಲ್ಲಿ ಬಿಡದಿ ಟೌನ್‌ಶಿಪ್ ವಿಚಾರದ ಬೆಳವಣಿಗೆಗಳು ಆಗುತ್ತಿವೆ. ಈ ಟೌನ್‌ಶಿಪ್ ಪಿತಾಮಹ ಎಂದು ನನ್ನನ್ನು ಕರೆದಿದ್ದಾರೆ ಎಂದು ಹೇಳಿ, ವಿಧಾನಸಭಾ ಕಲಾಪದಲ್ಲಿ ಕಾಂಗ್ರೆಸ್ ನಾಯಕರು ಟೌನ್‌ಶಿಪ್ ವಿರೋಧಿಸಿ ಮಾಡಿದ್ದ ಭಾಷಣದ ಪ್ರಮುಖ ಅಂಶಗಳನ್ನು ಉಲ್ಲೇಖಿಸಿದರು.

ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರ ಪತನವಾಗಿ ರಾಷ್ಟ್ರಪತಿ ಆಳ್ವಿಕೆ ಬಂದ ಸಂದರ್ಭದಲ್ಲಿ ಸ್ಥಗಿತವಾಗಿದ್ದ ಯೋಜನೆಗೆ ಚಾಲನೆ ನೀಡಲಾಗಿದೆ. 2009ರಲ್ಲಿದ್ದ ಬಿಜೆಪಿ ಸರ್ಕಾರ ಯೋಜನೆ ಸ್ಥಗಿತಗೊಳಿಸಲು ನಿರ್ಧರಿಸಿ ಡಿಎಲ್‌ಎಫ್ ಬಡ್ಡಿ ಸಹಿತ ಹಣ ನೀಡಿದೆ. ಅಲ್ಲಿಗೆ ಈ ಯೋಜನೆ ಮುಕ್ತಾಯಗೊಂಡಿತ್ತು.


2018ರಲ್ಲಿ ನಾನು 2ನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಈ ಯೋಜನೆ ಮುಂದುವರೆಸಬಹುದಿತ್ತು. ಆದ-'ರೆ ಆ ಕಾರ್ಯ ಮಾಡಲಿಲ್ಲ. 20 ವರ್ಷಗಳ ನಂತರ ಕಾಂಗ್ರೆಸ್ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಗಿದೆ ಎಂದು ಆರೋಪಿಸಿದ ಅವರು, ಬೆಂಗಳೂ ರಿನ ಮಾಸ್ಟರ್ ಪ್ಲಾನ್ ಮಾಡುವಾಗ ರೆಡ್‌ಝೋನ್ ಎಂದು ಗುರುತಿಸಲಾಗಿದೆ ಅಷ್ಟೇ ಎಂದರು. ರೈತರ ಪರವಾಗಿ ಡಿನೋಟಿಫಿಕೇಷನ್ ಮಾಡಿ ಜೈಲಿಗೆ ಹೋಗೊಲ್ಲ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಆದರೆ ರೀಡೂ ವಿಚಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ಜೈಲಿಗೆ ಹೋಗಿದ್ದಾರೆಯೇ ಎಂಬುದನ್ನು ಪ್ರಶ್ನಿಸಿದ ಅವರು, ಸತ್ತವರ ಹೆಸರಿನಲ್ಲಿ ಹೆಬ್ಬೆಟ್ಟು ಹಾಕಿಸಿ ಡಿನೋಟಿಫಿಕೇಷನ್ ಮಾಡಿಸಿದ್ದ ಭಯ ಅವರಿಗೆ ಕಾಡುತ್ತಿರಬೇಕು ಎಂದು ಟೀಕಿಸಿದರು. ಇದೇ ಮುಖ್ಯಮಂತ್ರಿ ಬಿಎಂಐಸಿಪಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಯೋಜನೆಗೆ ಭೂಮಿ ಕಳೆದುಕೊಂಡ ರೈತರು ಅರ್ಜಿ ಹಾಕಿ 30 ವರ್ಷದಿಂದ ಕಾಯುತ್ತಿದ್ದಾರೆ. ಅವರಿಗೆ ನಿವೇಶನ ನೀಡಿಲ್ಲ. ಬಿಡದಿ ಟೌನ್‌ಶಿಪ್ ಯೋಜನೆ ಇನ್ನೊಂದು ನೈಸ್ ಯೋಜನೆಯಾಗಲಿದೆ. ಈ ಯೋಜನೆಗೆ ನಾಲ್ಕೂವರೆ ಸಾವಿರ ರೈತರು ಅರ್ಜಿ ಹಾಕಿ ಆಕ್ಷೇಪ ವ್ಯಕ್ತಪಡಿಸಿದರೂ ಪರಿಗಣಿಸಿಲ್ಲ. ಈಗ ಪ್ರಜಾ ಸೇವಾ ಇಲಾಖೆ ಮಾಡುತ್ತಾರಂತೆ. ಅದು ಇನ್ನೊಂದು ನೈಸ್ ಕಂಪನಿ ಆಗದಿರಲಿ ಎಂದು ವ್ಯಂಗ್ಯವಾಡಿದರು. ಕಾನೂನು ಹೋರಾಟ ಡಿನೋಟಿಫಿಕೇಷನ್ ವಿರೋಧಿಸಿ 450 ದಿನಗಳಿಗೂ ಹೆಚ್ಚು ಕಾಲದಿಂದ ರೈತರು ಧರಣಿ ನಡೆಸುತ್ತಿರುವ ಸ್ಥಳಕ್ಕೆ ಹೋಗೋಣ ಬನ್ನಿ ಎಂದು ಮುಖ್ಯಮಂತ್ರಿಗಳನ್ನು ಆಹ್ವಾನಿಸಿದರು. ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತರ ಹಿತ ಕಾಪಾಡಲು ಕಾನೂನು ಹೋರಾಟ ಮಾಡಲಾಗುವುದು. ದಾಖಲೆ ಸಿದ್ದಪಡಿಸಲು ತಂಡ ರಚಿಸಲಾಗಿದೆ.

## ಇಂದು ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 22 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲಾಡಳಿತದ ವತಿಯಿಂದ ಜೂನ್ 27ರಂದು ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ಜುಲೈ 2ರಂದು ಡಾ.ಫ.ಗು.ಹಳಕಟ್ಟಿಯವರ ಜನ್ಮ ದಿನದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಆಚರಿಸಲಾಗುತ್ತದೆ.**





ಈ ಜಯಂತಿಗಳ ಅಂಗವಾಗಿ ಜೂನ್ 23ರ ಬೆಳಿಗ್ಗೆ 11ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು, ವಿವಿಧ ಸಮಾಜದ ಮುಖಂಡರು, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಡ್ಡಮತದಾನ ಆರೋಪ ನಿರಾಧಾರ: ಶಾಸಕ ಮಾನಪ್ಪ ವಜ್ಜಲ್ ಸ್ಪಷ್ಟನೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿರುವ ಆರೋಪಗಳನ್ನು ಬಿಜೆಪಿ ಶಾಸಕ ಮಾನಪ್ಪ ವಜ್ಜಲ್ ತೀವ್ರವಾಗಿ ಖಂಡಿಸಿದ್ದಾರೆ. ಪಕ್ಷದ ಸೂಚನೆಯಂತೆ ತಾವು ಮತಚಲಾಯಿಸಿದ್ದು, ತಮ್ಮ ವಿರುದ್ಧ ಕೇಳಿಬರುತ್ತಿರುವ ಆರೋಪಗಳಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದು ತಿಳಿಸಿದ್ದಾರೆ.**

"ಬಿಜೆಪಿ ನನಗೆ ತಾಯಿಯಂತಿದೆ. ಪಕ್ಷವೇ ನನಗೆ ರಾಜಕೀಯ ಗುರುತನ್ನು ನೀಡಿದೆ. ನಾನು ಯಾವತ್ತೂ ಪಕ್ಷದ ವಿರುದ್ಧ ನಡೆದುಕೊಳ್ಳುವುದಿಲ್ಲ," ಎಂದು ಅವರು ಹೇಳಿದರು. "ನಾನು ಅಡ್ಡಮತದಾನ



ಮಾಡಿರುವುದನ್ನು ಯಾರಾದರೂ ಸಾಬೀತುಪಡಿಸಿದರೆ, ಇಂದೇ ರಾಜಕೀಯದಿಂದ ನಿವೃತ್ತಿ ಪಡೆದು ಬಿಜೆಪಿ ಕಚೇರಿಯಲ್ಲಿ ಗೇಟ್ ಕಾಯುವ ಕೆಲಸ ಮಾಡುತ್ತೇನೆ. ಅಗತ್ಯವಿದ್ದರೆ ಕಸಗೂಡಿಸುವ ಕೆಲಸಕ್ಕೂ ಸಿದ್ಧ," ಎಂದು ಸವಾಲು ಹಾಕಿದರು.

ತಮ್ಮ ರಾಜಕೀಯ ಜೀವನದಲ್ಲಿ ಪಕ್ಷನಿಷ್ಠೆಗೆ ಸದಾ ಆದ್ಯತೆ ನೀಡಿರುವುದಾಗಿ ಹೇಳಿದ ಅವರು, ಸುಳ್ಳು ಆರೋಪಗಳ ಮೂಲಕ ತಮ್ಮ ಹೆಸರಿಗೆ ಧಕ್ಕೆ ತರುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಈ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

## ಭಾರತ ಗೌರವ ಪ್ರೇರಣಾ ಸಮ್ಮಾನ್ ಪ್ರಶಸ್ತಿ ಮಲ್ಲಿಕಾರ್ಜುನ ಬಿ ಹಡಪದ ಸುಗೂರ ಎನ್ ಲಬಿಸಿದೆ.

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಚಿತ್ತಾಪುರ ತಾಲೂಕಿನ ಸುಗೂರ ಎನ್ ಗ್ರಾಮದ ಮಲ್ಲಿಕಾರ್ಜುನ ಹಡಪದ ಅವರು ಸಮಾಜದ ಸೇವೆಯ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಗುರ್ತಿಸಿ ಸೇವಾ ಪ್ರೀತಿ ಫೌಂಡೇಷನ್ ಯುಪಿ ಯ ಲಕ್ನೊ ವತಿಯಿಂದ ಈ ನಿಮ್ಮ ಹಡಪದ ಅಪ್ಪಣ್ಣ ಸಮಾಜದ ಸೇವಕನ ಸೇವೆಯನ್ನು ಗುರುತಿಸಿ'**

ಭಾರತ ಗೌರವ ಪ್ರೇರಣ ಸಮ್ಮಾನ್". ಪ್ರಶಸ್ತಿ 'ಯ ಸರ್ಟಿಫಿಕೇಟ್ ಅನ್ನು ಕೊಡಮಾಡುವ 2026 ನೇ ಸಾಲಿನ ಭಾರತ ಗೌರವ ಪ್ರೇರಣಾ ಸಮ್ಮಾನ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಈ ಪ್ರಶಸ್ತಿ ಸರ್ಟಿಫಿಕೇಟ್ ಪಡೆಯಲಾಯಿತು. ಉತ್ತರ ಪ್ರದೇಶದ ಲಕ್ನೋ ದ "ಸೇವಾ ಪ್ರೀತಿ ಫೌಂಡೇಷನ್ ಸಂಸ್ಥೆಯ ವತಿಯಿಂದ ಇದೇ ಕರ್ನಾಟಕ ರಾಜ್ಯದ ಕಲಬುರಗಿ ಜಿಲ್ಲೆಯ ಹಡಪದ



ಶ್ರೀ ಶಿವಶರಣ ಹಡಪದ ಅಪ್ಪಣ್ಣನವರು

ಅಪ್ಪಣ್ಣ ಸಮಾಜದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಯಾಗಿ ಮತ್ತು ಸಮಾಜದ ಸಂಘಟನಾ ಜೊತೆಯಲ್ಲಿ ವಿಭಿನ್ನವಾದ ರೀತಿಯ ಅನೇಕ ಅನಾಥರಿಗೆ. ನಿರ್ಗತಿ-ಕರಿಗೆ. ಅಂಧರಿಗೆ. ಪೌರ ಕಾರ್ಮಿಕರಿಗೆ.



ಕಟ್ಟಡ ಕಾರ್ಮಿಕರಿಗೆ. ಅನಾಥ ನಿರ್ಗತಿಕ-ರಿಗೆ. ಶಾಲಾ ಮಕ್ಕಳಿಗೆ. ಸಾಧು -ಸಂತರಿಗೆ ಹೀಗೆ ಒಟ್ಟು 1965ಕ್ಕೂ ಹೆಚ್ಚು ಅನಾಥ ಜನತೆಗೆ ಪ್ರೀಯಾಗಿ ಸೇವೆ ಸಲ್ಲಿಸಿದ್ದಾರೆ. ಇದನ್ನು ಗುರುತಿಸಲ್ಪಡುವ ಮೂಲಕ ಈ ಮಲ್ಲಿಕಾರ್ಜುನ ಬಿ ಹಡಪದ ಸುಗೂರ ಎನ್ ಅವರಿಗೆ ಸಮಾಜಮುಖಿ ಕಾರ್ಯ ಚಟುವಟಿಕೆಗಳನ್ನು ಗುರುತಿಸಿ ಭಾರತ ಗೌರವ ಪ್ರೇರಣಾ ಸಮ್ಮಾನ್ 'ಪ್ರಶಸ್ತಿ ಸರ್ಟಿಫಿಕೇಟ್ ಪ್ರಶಸ್ತಿಯ ಸಮಾರಂಭ ಇದೇ ಜೂನ್ 26 ರಂದು ಜರುಗಲಿದ್ದು.ಈ ಪ್ರಶಸ್ತಿ ಪ್ರಧಾನ ಸೇರಿದಂತೆ ಅನೇಕ ಗಣ್ಯ ಮಾನ್ಯರು ಈ ಪ್ರಶಸ್ತಿಯನ್ನು ವಿತರಿಸಲಿದ್ದಾರೆ ಎಂದು ಸಮಾಜ ಸೇವಕ ಮಲ್ಲಿಕಾರ್ಜುನ ಬಿ ಹಡಪದ ಸುಗೂರ ಎನ್ ಅವರು ತಿಳಿಸಿದರು..

## ಸಹನಾ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಮುದಗಲ್: ಸಹನಾ ಇಂಗ್ಲಿಷ್ ಮೀಡಿಯಂ ಶಾಲೆ, ಮುದಗಲ್ನಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಯೋಗಾಭ್ಯಾಸ ಮಾಡಿದರು.**

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯೋಪಾಧ್ಯಾಯ ಆದಿತ್ಯ ಅವರು ಮಾತನಾಡಿ, ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುವ ಅತ್ಯುತ್ತಮ ಸಾಧನವಾಗಿದ್ದು, ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಶಾಲೆಯ ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ತಾಡಾಸನ, ವೃಕ್ಷಾಸನ,



ಭುಜಂಗಾಸನ, ವಜ್ರಾಸನ ಸೇರಿದಂತೆ ವಿವಿಧ ಯೋಗಾಸನಗಳನ್ನು ಪ್ರದರ್ಶಿಸಿದರು. ಯೋಗದ ಮಹತ್ವ, ಆರೋಗ್ಯದ ಮೇಲೆ ಅದರ ಪರಿಣಾಮ ಹಾಗೂ ಒತ್ತಡ ನಿವಾರಣೆಯಲ್ಲಿ ಯೋಗದ ಪಾತ್ರದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಯೋಗಾಭ್ಯಾಸದ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ಅನುಸರಿಸುವ ಸಂಕಲ್ಪ ಮಾಡಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಂ-ಯರಾದ , ಪ್ರಿಯಾಂಕ,ಕವಿತಾ, ರಾಧಾ , ಹೀನ ಬೇಗಂ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಯಾದ ಸುಮಯ್ಯ ನಿರೂಪಿಸಿದರು. ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

## ನ್ಯಾಯಾಧೀಶರು ನಿಷ್ಕಲ್ಮಶವಾಗಿ ವಾದ-ವಿವಾದ ಕೇಳಿ ನಿಷ್ಪಕ್ಷಪಾತ ನ್ಯಾಯದಾನ ಮಾಡಲು ವಕೀಲರಿಗೆ ಸಲಹೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನ್ಯಾಯಾಧೀಶರು ನಿಷ್ಕಲ್ಮಶವಾಗಿ ವಾದ-ವಿವಾದ ಗಳನ್ನು ಕೇಳಿ, ನಿಷ್ಪಕ್ಷಪಾತವಾಗಿ ನ್ಯಾಯದಾನ ಮಾಡಬೇಕು ಎಂದು ರಾಯಚೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಮಾರುತಿ ಬಾಗಡೆ ಹೇಳಿದರು. ಅವರು ವಕೀಲರ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.**

ಸಾಮಾನ್ಯ ಜನರಿಗೆ ನ್ಯಾಯಾಲಯಗಳ ಬಗ್ಗೆ ಅಪಾರ ಗೌರವವಿದೆ. ಅದಕ್ಕಾಗಿ ನ್ಯಾಯಾಲಯಗಳನ್ನು ಜನತೆ ಗೌರವಿಸುತ್ತಾರೆ. ಜೊತೆಗೆ ನ್ಯಾಯ ಮಂದಿರವೆಂದು ಕರೆಯುತ್ತಾರೆ. ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ವರ್ಗದವರು, ಎಲ್ಲರೂ ನ್ಯಾಯದಾನಕ್ಕೆ ಶ್ರಮಿಸಬೇಕು. ವಕೀಲರು ಅನ್ನ ಕೊಡುವ ಕಕ್ಷಿದಾರರಿಗೆ ಹಾಗೂ





ನ್ಯಾಯಾಧೀಶರು ಸಂಬಳ ಕೊಡುವ ಸರ್ಕಾರಕ್ಕೆ ಎಂದು ದ್ರೋಹ ಮಾಡದಂತೆ ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ರಾಯಚೂರು ಜಿಲ್ಲಾ ನ್ಯಾಯಾಧೀಶರಾಗಿ ವರ್ಗಾವಣೆಗೊಂಡಿರುವ ಬಿ.ಬಿ.ಜಕಾತಿ ಅವರು ಮಾತನಾಡಿ, ತಾವು ಮೂರು ವರ್ಷಗಳ ಕಾಲ ಸಿಂಧನೂರಿನಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಿದ ತೃಪ್ತಿಯಿದೆ. ಆತ್ಮಸಾಕ್ಷಿಗೆ ಅನುಗುಣವಾಗಿ ನಾನು ತೀರ್ಪುಗಳನ್ನು ಕೊಟ್ಟಿದ್ದೇನೆ. ವಕೀಲರ ಸಹಕಾರವಿಲ್ಲದೆ ನ್ಯಾಯಾಧೀಶರು ಕೆಲಸ ಮಾಡಲು ಸಾಧ್ಯವಿಲ್ಲ ಎಂದೇಳಿ, ಅಪರಾಧಿಗೆ ಶಿಕ್ಷೆಯಾಗಬೇಕು. ನಿರಪರಾಧಿಗೆ ಶಿಕ್ಷೆ ಆಗದಂತೆ ನೋಡಿಕೊಳ್ಳುವುದೇ ನ್ಯಾಯಾಂಗ ವ್ಯವಸ್ಥೆಯ ಮೂಲ ಉದ್ದೇಶವಾಗಿದೆ. ಸಮಾಜವನ್ನು ತಿದ್ದುವ ಕೆಲಸವನ್ನು ವಕೀಲರು, ನ್ಯಾಯಾಧೀಶರು, ಮಾಡಬೇಕಾಗಿದೆ. ಅಂದರೆ ಮಾತ್ರ ಅಪರಾಧಗಳ ಸಂಖ್ಯೆ ಕಡಿಮೆಯಾಗಲು ಸಾಧ್ಯವೆಂದು ಅಭಿಪ್ರಾಯ ಪಟ್ಟರು.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಲಕ್ಷ್ಮಿಕಾಂತ್ ಮಿಸ್ಕಿನ್, ವಕೀಲರಾದ ಎನ್. ಕೋಟೇಶ್ವರರಾವ್, ಜಿ.ಎಸ್.ಆರ್.ಕೆ.ರೆಡ್ಡಿ, ಅಬ್ದುಲ್ ಗಣಿಸಾಬ್, ನಾಗರಾಜ್ ಮಸ್ಕಿ, ಅಮರೇಗೌಡ ಕಲ್ಮಂಗಿ, ಶಶಿಧರಗೌಡ ಕಲ್ಲೂರು, ಎಂ.ಅಮರೇಗೌಡ, ಈಶಪ್ಪ ದೇಸಾಯಿ, ಎಚ್.ವೀರಭದ್ರಪ್ಪ, ಎಸ್.ಎಸ್.ಖಾದ್ರಿ, ಶೇಖರಪ್ಪ ಧೂಮತಿ, ಹಾಗೂ ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಅಧ್ಯಕ್ಷ ಎನ್.ಭೀಮನಗೌಡ ಸೇ-ರಿದಂತೆ ಅನೇಕ ವಕೀಲರು ಮಾತನಾಡಿದರು.

ವಕೀಲರ ಸಂಘದ ಕಾರ್ಯದರ್ಶಿ ದುರಗೇಶ ತುರುವಿಹಾಳ, ಜಂಟಿ ಕಾರ್ಯದರ್ಶಿ ಹೀನಾ ದೇಸಾಯಿ, ಖಜಾಂಚಿ ಚಂದ್ರಶೇಖರ್ ತುರ್ವಿಹಾಳ ಉಪಸ್ಥಿತ-ರಿದ್ದರು. ಕೊಡಗು- ಮಡಿಕೇರಿಗೆ ವರ್ಗಾವಣೆಗೊಂಡ ಜಿಲ್ಲಾ ಪ್ರಧಾನ ನ್ಯಾಯಾಧೀಶ ಮಾರುತಿ ಬಾಗಡೆ, ರಾಯಚೂರು ಜಿಲ್ಲಾ ಪ್ರಧಾನ ನ್ಯಾಯಾಧೀಶರಾಗಿ ವರ್ಗಾವಣೆಗೊಂಡ ಬಿ.ಬಿ.ಜಕಾತಿ ಹಾಗೂ ಸರ್ಕಾರಿ ವಕೀಲರಾಗಿ ನಿವೃತ್ತಿಗೊಂಡ ಅಂಬಣ್ಣ ವಕೀಲರನ್ನು ವಕೀಲರ ಸಂಘದಿಂದ ಹಾಗೂ ವಿವಿಧ ವಕೀಲರು ಆತ್ಮೀಯವಾಗಿ ಸನ್ಮಾನಿಸಲಾಯಿತು. ವೀರೇಶ ಸಜ್ಜನ ಪ್ರಾರ್ಥಿಸಿದರು. ಹೇಮಲತಾ ಜೋಳದರಾಶಿ ಮೌನೇಶ ನಿರೂಪಿಸಿದರು.

## ಸಾಹಿತ್ಯ ಸಿಂಚನ

### ಕ್ರೀಡೆ ಕವನ

ಕ್ರೀಡೆ ಜೀವನದ ಉಸಿರಿನಂತೆ,
ಉತ್ಸಾಹ ತುಂಬುವ ನದಿಯಂತೆ?

ಆಟದ ಮೈದಾನವೇ ಪಾಠಶಾಲೆ,
ಶ್ರಮದ ಮೂಲಕ ತೆರೆಸುವ ಬಾಗಿಲೆ?

ಗೆಲುವು ಸೋಲು ಎರಡೂ ಸ್ನೇಹಿತರು,
ಜೀವನ ಪಥದ ನಿಜ ಗುರುಗಳು?

ಓಡುವ ಹೆಜ್ಜೆ ಕನಸು ಬೆನ್ನಟ್ಟಲಿ,
ಪ್ರತಿ ಪ್ರಯತ್ನ ಜಯದ ದಾರಿ ತೋರಲಿ?

ತಂಡದ ಜೊತೆಗೆ ಬೆಳೆವ ಒಗ್ಗಟ್ಟು,
ಕ್ರೀಡೆ ಕಲಿಸುವ ಸೌಹಾರ್ದ ಮುತ್ತು?

ದೇಹಕ್ಕೆ ಬಲ, ಮನಕ್ಕೆ ಧೈರ್ಯ,
ಕ್ರೀಡೆಯಲ್ಲಿದೆ ಯಶಸ್ಸಿನ ವೈಭವ?

ಆಟವಾಡೋಣ ಮನಸಾರೆ ಎಲ್ಲರೂ,
ಆರೋಗ್ಯವಾಗಿರೋಣ ಸಂತೋಷದಿಂದ
ನಾವೆಲ್ಲರೂ?

ರಮೇಶ್

## ಬಸ್ ಆಲ್ದಾಳ ಗ್ರಾಮ ಹೊರವಲಯದಲ್ಲಿ ರಸ್ತೆ ಬಿಟ್ಟು ಜಮೀನಿನಲ್ಲಿ ಇಳಿದ ಪರಿಣಾಮ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿ 90 ಜನರಿಗೆ ಗಾಯ

❑ ನೈಜ್ಯ ದೆಸೆ ನ್ಯೂಸ್

**ಕೆಂಭಾವಿ: ಪಟ್ಟಣದಿಂದ ತಾಳಿಕೋಟಿ ತೆರಳುತ್ತಿದ್ದ ಕೆಎ 33 ಎಫ್ 0394 ಬಸ್ ಆಲ್ದಾಳ ಗ್ರಾಮ ಹೊರವಲಯದಲ್ಲಿ ರಸ್ತೆ ಬಿಟ್ಟು ಜಮೀನಿನಲ್ಲಿ ಇಳಿದ ಪರಿಣಾಮ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿ 90 ಜನರಿಗೆ ಗಾಯಗಳಾಗಿವೆ.**



ಕೆಂಭಾವಿ ಸರ್ಕಾರಿ ಹಾಗೂ ಖಾಸಗಿ ಆಂಬುಲೇನ್ಸ್ ಹಾಗೂ ವಿವಿಧ ಕಾರಗಳ ಮೂಲಕ ವಿದ್ಯಾರ್ಥಿಗಳು ಮಹಿಳೆಯರು ಇತರೆ ಜನರಿಗೆ ಸರ್ಕಾರ ಆಸ್ಪತ್ರೆಗೆ ಸಾಗಿಸಲಾಗಿದೆ. ಕೆಂಭಾವಿಯಿಂದ ತಾಳಿಕೋಟಿ ತೆರಳುವ 8:30 ವೇಳೆ ಘಟನೆ ನಡೆದಿದೆ. ಬಸ್ ಪಲ್ಟಿ ಬಳಿಕ ಜಮೀನಿನಲ್ಲಿದ್ದ ವಿದ್ಯುತ್ ಕಂಬಕ್ಕೆ ಟಚ್ ಆಗಿ ಉರುಳಿಕೆ ನಿಂತಿದೆ. ಒಂದು ವೇಳೆ ವಿದ್ಯುತ್ ಕಂಬ ಬಿದ್ದಿದ್ದರೆ ಇಡೀ ಬಸ್ ಸುಟ್ಟು ಹೋಗುವ ಸಂಬವ ಹೆಚ್ಚಿತ್ತು. ಬಸ್ ಚಾಲಕ ಕುಡಿದು ವಾಹನ ಚಾಲನೆ ಮಾಡುತ್ತಿರುವುದರಿಂದ ಅಪಘಾತಕ್ಕೆ ಕಾರಣವಾಗಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದರು. ವಿದ್ಯಾರ್ಥಿಗಳಿಗೆ ಕೆಲವರಿಗೆ ಗಂಭೀರ ಗಾಯಗಳಾದರೆ ಇನ್ನೂ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಹೀಗ ಬಸ್ ಅಪಘಾತದಲ್ಲಿ ಒಳಗಾದವರಿಗೆ ಕೆಂಭಾವಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# "ಮಸ್ಕಿ ಹಳೆ ಬಸ್ ನಿಲ್ದಾಣದಲ್ಲಿ ಆಸನ ಹಾಗೂ ನೆರಳಿನ ವ್ಯವಸ್ಥೆ"

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಬಸ್ ಸೇಲ್ಟರ್ ಇಲ್ಲದೆ ಪ್ರಯಾಣಿಕರು ಬಸ್ ಪ್ರಯಾಣಕ್ಕೆ ನಿಲ್ಲಲ್ಲು ನೆರಳು ಕುರಿತುಕೊಳ್ಳಲು ಆಸನ ವ್ಯವಸ್ಥೆ ಇಲ್ಲದೆ ಬಿಸಿಲು ಮಳೆ ಎನ್ನದೆ ನಿಂತು ಕೊಂಡು ಕಾಯುವ ಪರಿಸ್ಥಿತಿ ಇದ್ದು ಇದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ಹಿರಿಯ ನಾಗರೀಕರು, ರೋಗಿಗಳಿಗೆ ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶಗಳಿಗೆ ತೆರಳಲು ತುಂಬಾ ತೊಂದರೆ ಆಗುತ್ತಿದೆ.**



ಹಿಂದೆ ಇಲ್ಲಿ ದೊಡ್ಡ ದೊಡ್ಡ ಮರಗಳು ಇದ್ದವು ಸೇಲ್ಟರ್ ಕೂಡ ಇತ್ತು. ಈ ಪಟ್ಟಣದ ಮೂಲಕ ಹಾದು ಹೋಗಿರುವ ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿ ಆಗಿ ಮೇಲ್ದರ್ಜೆಗೆರಿದ ಕಾರಣ ರಸ್ತೆ ಅಗಲೀಕರಣಕ್ಕಾಗಿ ಎಲ್ಲವನ್ನು ತೆರವು ಮಾಡಲಾಯಿತು. ಇದರ ಪರಿಣಾಮ ಅಲ್ಲಿ ಸೇಲ್ಟರ್ ನಿರ್ಮಿಸಲು ಪುರಸಭೆಗೆ ಸಾರ್ವಜನಿಕರು ಹಾಗೂ ಮುಖಂಡರು ಸಾಕಷ್ಟು ಮನವಿ ಮಾಡಿದ್ದರೂ ಕೂಡ ನಿದ್ದೆಗೆ ಜಾರಿದ ಆಡಳಿತಕ್ಕೆ ಬೇಸತ್ತು ಹೋಗಿದ್ದಾರೆ.

ದಿನನಿತ್ಯದ ಪ್ರಯಾಣಿಕರ ಈ ಸಮಸ್ಯೆ ಮನಗಂಡು ಪಟ್ಟಣದ ಗಂಗಾಮತಸ್ಥ ಸಮಾಜದ ಮುಖಂಡರು ಹಾಗೂ ವೀರಶೈವ ಸಹಕಾರಿ ಸಂಘ ನಿಯಮಿತ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಸೇರಿ ನಾಲ್ಕು ಬೆಂಚುಗಳು, ಕುಡಿಯುವ ನೀರು ಹಾಗೂ ನೆರಳಿನ ವ್ಯವಸ್ಥೆ ಮಾಡಿದ್ದಾರೆ. ಈ ಕುರಿತು ಮಾತನಾಡಿದ ಸಮಾಜದ ಮುಖಂಡರು ಇಂತಹ ವ್ಯವಸ್ಥೆಯನ್ನು ಸ್ಥಳೀಯ ಪುರಸಭೆ ಹಾಗೂ ಶಾಸಕರು ಮಾಡಬೇಕಾದ ಕೆಲಸವನ್ನು ವೀರಶೈವ ಕೃಷಿ ಪತ್ತಿನ ಸಹಕಾರಿ ಸಂಘ ಹಾಗೂ ಗಂಗಾ ಮತ ಸಮಾಜ ಮಾಡಿರುವುದು ಪರೋಪಕಾರಿ ಸೇವಾ ಮನೋಭಾವನೆ ತೋರಿಸುತ್ತದೆ. ಇಂತಹ ಸಾಮಾಜಿಕ ಕಾರ್ಯಗಳನ್ನು ಸರ್ವರೂ ಮಾಡಬೇಕು ಅವರ ಈ ಸೇವಾಗುಣ–ಕ್ಕೆ ಪ್ರತಿಫಲ ಸಿಗಲಿ ಎಂದು ಹಾರೈಸಿದರು.

ನಂತರ ಮಾತನಾಡಿದ ಸಹಕಾರಿ ಸಂಘದ ಅಧ್ಯಕ್ಷರಾದ ನಾಗಭೂಷಣ್ ಬಾರೆಕರ್ ಇದು ರಾಷ್ಟ್ರೀಯ ಹೆದ್ದಾರಿ ಆಗಿ ಅಗಲೀಕರಣ ಆದ ಕಾರಣ ಇಲ್ಲಿ ಜಾಗದ ಅಭಾವ ಇರುವ ಕಾರಣ ಇಲ್ಲಿನ ಪೊಲೀಸ್ ಇಲಾಖೆ ಇಲ್ಲಿ ಸರ್ಕಾರಿ ಬಸ್ ನಿಲುಗಡೆ ಹೊರತುಪಡಿಸಿ ಯಾವುದೇ ಖಾಸಗಿ ವಾಹನಗಳು ನಿಲ್ಲಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ವೀರಶೈವ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಗಂಗಾ ಮತ ಸಮಾಜದ ಅಧ್ಯಕ್ಷರು ಮುಖಂಡರು ಪಾಲ್ಗೊಂಡಿದ್ದರು.

# ಚೆಕ್‌ಡ್ಯಾಂ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಆರೋಪ

## ಜಿಲ್ಲಾ ಮಟ್ಟದ ತನಿಖೆಗೆ ಆಗ್ರಹ ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: 2025–26ನೇ ಸಾಲಿನಲ್ಲಿ ಮಾನ್ವಿ ಹಾಗೂ ಸಿರವಾರ ತಾಲೂಕು ವ್ಯಾಪ್ತಿಯಲ್ಲಿ ಎಸ್.ಇ.ಪಿ/ಟಿ.ಎಸ್.ಪಿ ಮತ್ತು ಇತರೆ ಯೋಜನೆಗಳಡಿ ಕೈಗೊಂಡಿರುವ ಚೆಕ್‌ಡ್ಯಾಂ ಕಾಮಗಾರಿಗಳಲ್ಲಿ ಭಾರಿ ಪ್ರಮಾಣದ ಅವ್ಯವಹಾರ, ಭ್ರಷ್ಟಾಚಾರ ಹಾಗೂ ಸರ್ಕಾರದ ಹಣ ದುರುಪಯೋಗ ನಡೆದಿರುವ ಕು–ರಿತು ಜಿಲ್ಲಾ ಮಟ್ಟದ ತನಿಖಾ ತಂಡ ರಚಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಅಧ್ಯಕ್ಷ ಬಸವರಾಜ ನಕ್ಕುಂದಿ ಒತ್ತಾಯಿಸಿದರು.**

ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಮಾತನಾಡಿದ ಅವರು, ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಲೋಕೇಶ್ ಹಾಗೂ ಕಿರಿಯ ಅಭಿಯಂತರರಾದ ಉಪೇಂದ್ರ ಮತ್ತು ಸುರೇಶ್ ಅವರು ಮಾನ್ವಿ ಹಾಗೂ ಸಿರವಾರ ತಾಲೂಕುಗಳಲ್ಲಿ 80ಕ್ಕೂ ಹೆಚ್ಚು ಚೆಕ್‌ಡ್ಯಾಂ ಕಾಮಗಾ–ರಿಗಳನ್ನು ಕೆಟಿಪಿಪಿ ಕಾಯ್ದೆ ಹಾಗೂ ಇತರೆ ತಾಂತ್ರಿಕ ನಿಯಮಗಳನ್ನು ಉಲ್ಲಂಘಿಸಿ ಕೈಗೊಂಡಿದ್ದಾರೆ ಎಂದು ಆರೋಪಿಸಿದರು. ಕಪ್ಪು ಮಣ್ಣಿನ ಪ್ರದೇಶಗಳಲ್ಲಿ ಅವೈಜ್ಞಾನಿಕವಾಗಿ ಚೆಕ್‌ಡ್ಯಾಂ ನಿರ್ಮಾಣ ಮಾಡಿರುವುದ–ರಿಂದ ಸರ್ಕಾರದ ಕೋಟ್ಯಂತರ ರೂಪಾಯಿ ವ್ಯರ್ಥವಾಗಿದ್ದು, ಎಸ್‌ಸಿ/ಎಸ್‌ಟಿ ರೈತ–ರಿಗೆ ಮೀಸಲಾದ ಅನುದಾನವನ್ನು ಬೇರೆಡೆ ಬಳಕೆ ಮಾಡಲಾಗಿದೆ ಎಂದು ದೂರಿದರು. ಅಲ್ಲದೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅನುಮತಿ ಪಡೆಯದೆ ಉಪಖನಿಜ ಬಳಕೆ, ನಾಮಫಲಕ ಅಳವಡಿಸದೇ ಕಾಮಗಾರಿ ನಿರ್ವಹಣೆ ಹಾಗೂ ಸರ್ಕಾರಿ ಜಮೀನಿನಲ್ಲಿ ನಿಯಮಬಾಹಿರ ಕಾಮಗಾರಿಗಳನ್ನು ನಡೆಸಿರುವ ಆರೋಪಗಳನ್ನೂ ಮಾಡಿದರು.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕರ್ನಾಟಕ ನೀರಾವರಿ ಕಾಯ್ದೆ–1965, ಭ್ರಷ್ಟಾಚಾರ ತಡೆ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳಡಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ತಪ್ಪಿತಸ್ಥ ಅಧಿಕಾರಿಗಳನ್ನು ಸೇವೆಯಿಂದ ಅಮಾನತುಗೊಳಿಸಬೇಕು. ಜೊತೆಗೆ ಕಾಮಗಾರಿಗಳ ತಾಂತ್ರಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ತನಿಖೆ ನಡೆಸಿ ಸರ್ಕಾರದ ಹಣದ ದುರುಪಯೋಗಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷ ಪರುಶುರಾಮ ಬಾಗಲವಾಡ, ದಲಿತ ಚಳುವಳಿ ತಾಲೂಕು ಅಧ್ಯಕ್ಷ ಚಂದ್ರಶೇಖರ ಮಾನ್ವಿ, ದಲಿತ ಮುಖಂಡ ಯಲ್ಲಪ್ಪ ಸೀಕಲ್, ದಲಿತ ಸಮರ ಸೇನೆ ತಾಲೂಕು ಅಧ್ಯಕ್ಷ ಅನಿಲ್ ಕುಮಾರ್, ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರಸರೆಡ್ಡಿ ಮಾನ್ವಿ, ವಿದ್ಯಾರ್ಥಿ ಒಕ್ಕೂಟ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಜಾಗೀರ್ ಪನ್ನೂರು, ದಲಿತ ಸಂಘರ್ಷ ಸಮಿತಿ ತಾಲೂಕು ಅಧ್ಯಕ್ಷ ಹನುಮೇಶ ಜಾಗೀರ್ ಪನ್ನೂರು, ಖಜಾಂಚಿ ಅಮರೇಶ ಜಾಗೀರ್ ಪನ್ನೂರು, ದಲಿತ ಮುಖಂಡ ಶಾಂತರಾಜ ಜಾಗೀರ್ ಪನ್ನೂರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಮಸ್ಕಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಬಿರುಕು ಒಬ್ಬರಿಗೊಬ್ಬರ ಆರೋಪ, ಪ್ರತ್ಯಾರೋಪ.!

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು; ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ ಅವರ ಕಾರ್ಯವೈಖರಿಯ ಬಗ್ಗೆ ಕಾಂಗ್ರೆಸ್‌ನ ಕಾರ್ಯಕರ್ತರಲ್ಲಿ ಆರೋಪ ಹಾಗೂ ಪ್ರತ್ಯಾರೋಪಗಳು ಮತ್ತು ಅವರ ಪರ ಮಾತುಗಳು, ಕೂಡ ಸಾಮಾಜಿ–ಕ ಜಾಲತಾಣಗಳಲ್ಲಿ ಹರಿದಾಡುತ್ತಾ ಕ್ಷೇತ್ರದ ಮತದಾರ ಪ್ರಭುಗಳಿಗೆ ಆಹಾರವಾಗುತ್ತಿದ್ದಾರೆ.**



ಶುಕ್ರವಾರ ಕಾಂಗ್ರೆಸ್ ಕಾರ್ಯಕರ್ತ ಮಹಾಂತೇಶ ನಾಯಕ ಜಾಲವಾಡಗಿ ಅವರು, ಮಸ್ಕಿ ಕ್ಷೇತ್ರದ ಶಾಸಕರ ಕಾರ್ಯವೈಖರಿ ಕು–ರಿತು, ಸಾಮಾಜಿಕ ಜಾಲತಾಣದಲ್ಲಿ ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದ್ದು, ತಮ್ಮ ಕುಟುಂಬದ ಏಳಿಗೆಗಾಗಿ ಎಲ್ಲಾ ಮಾಡುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರನ್ನು ಕಡೆಗಾಣಿಸುತ್ತಿದ್ದಾರೆ. ಸರ್ಕಾರದ ಎಲ್ಲಾ ಅನುದಾನವನ್ನು ತಮ್ಮ ತವರೂರು ತುರ್ವಿಹಾಳ ಪಟ್ಟಣಕ್ಕೆ ಹಾಕಿ ಮಸ್ಕಿ ತಾಲೂಕನ್ನು ಕಡೆಗಾಣಿಸುತ್ತಿದ್ದಾರೆ ಎಂದು ಆರೋಪ ಮಾಡಿದರು. ಇವರ ಆರೋಪದಲ್ಲಿ ಹುರುಳಿಲ್ಲ! ಮಸ್ಕಿ ಶಾಸಕರು ಎಲ್ಲರನ್ನೂ ಕೂಡ ಅಣ್ಣ, ತಮ್ಮ, ಅಕ್ಕ, ತಂಗಿಯಂತೆ ಮಾತನಾಡಿಸುತ್ತಾ, ಕ್ಷೇತ್ರದ ಜನರೊಂದಿಗೆ ನಿಕಟ ಸಂಪರ್ಕದಲ್ಲಿದ್ದಾರೆ. ಸಾವಿರಾರು ಕೋಟಿ ಅನುದಾನ ತಂದು, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಮಸ್ಕಿ ತಾಲೂಕಿಗೆ ಈಗಾಗಲೇ ಎಲ್ಲಾ ಆಫೀಸ್‌ಗಳನ್ನು ಸಹ ಬರುವಂತೆ ನೋಡಿಕೊಂಡಿದ್ದಾರೆ, ಕ್ಷೇತ್ರದಲ್ಲಿ ಶಾಲಾ, ಕಾಲೇಜುಗಳು, ಆಸ್ಪತ್ರೆಗಳು, ರಸ್ತೆ ಸುಧಾರಣೆಗೆ ಒತ್ತು ನೀಡಿದ್ದಾರೆ.

ಮುಂದಿನ 2028ರ ಚುನಾವಣೆಯಲ್ಲಿ ಕೂಡ ಇವರೆ ಶಾಸಕರಾಗುತ್ತಾರೆ. ಇವರ ಪರವಾಗಿ ನಾವೆಲ್ಲರೂ ದುಡಿಯುತ್ತೇವೆ, ಮಹಾಂತೇಶ ನಾಯಕ ಜಾಲವಾಡಗಿ ಅವರ ಆರೋಪ ಶುದ್ಧ ಸುಳ್ಳಿನಿಂದ ಕೂಡಿದೆ. ಅವರು ಕಾಂಗ್ರೆಸ್ ಕಾರ್ಯಕರ್ತರಾಗಿ ಈ ರೀತಿ ಪಕ್ಷದ ಅಭ್ಯರ್ಥಿ ಪರವಾಗಿ ಮಾತನಾಡದೆ, ವಿರೋಧ ಪಕ್ಷದವರಂತೆ ಮಾತನಾಡುವುದು ಸರಿಯಲ್ಲ. ಅವರು ಬೆಳಿಗ್ಗೆ 8 ಗಂಟೆಗೆ ಮನೆ ಬಿಟ್ಟರೆ ಮತ್ತೆ ರಾತ್ರಿ 8 ಗಂಟೆಗೆ ಮನೆ ಸೇರುತ್ತಾರೆ. ಕ್ಷೇತ್ರದಲ್ಲಿ ಬಿಡುವಿಲ್ಲದೆ ಶ್ರಮಿಸುವ ಶಾಸಕರಿಗೆ ಈ ರೀತಿ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಹೇಳಿಕೆ ಹೇಳಿ ಅವರ ಕಾರ್ಯವೈಖರಿಯ ಘನತೆಗೆ ಧಕ್ಕೆ ತರುವಂತಹ ಕೆಲಸ ಮಾಡಬಾರದು ಎಂದು ಮಹಿಳಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸರಸ್ವತಿ ಪಾಟೀಲ್ ಹೇಳಿದರು. ಈ ಸಂದರ್ಭದಲ್ಲಿ: ದೇವದುರ್ಗ ತಾಲೂಕು ಅಧ್ಯಕ್ಷೆ ಕೆ.ಅಮೃತಾ ಪಾಟೀಲ್, ಕಾರ್ಯಕರ್ತರಾದ ಶ್ರೀದೇವಿ, ಕರಿಯಮ್ಮ, ಕಮಲಾ, ಸೇರಿದಂತೆ ಇತರರು ಇದ್ದರು.

# ಸಿಂಧನೂರಿನಲ್ಲಿ ಸಾಂಕ್ರಾಮಿಕ ರೋಗಗಳು ಹಾಗೂ ನಾಯಿ ಕಡಿತದ ಕುರಿತು ಅರಿವು ಮೂಡಿಸಿದ ಆರೋಗ್ಯ ಇಲಾಖೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ,**



ಆದರ್ಶ ಕಾಲೋನಿ ವ್ಯಾಪ್ತಿಗೆ ಬರುವ ಗಂಗಾ ನಗರದಲ್ಲಿ ಇಂದು ಸಿಂಧನೂರು ಜೂನ್ 22. ಸಾಂಕ್ರಾಮಿಕ ರೋಗಗಳ ಮತ್ತು ನಾಯಿ ಕಡಿತದ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಶ್ರೀಮತಿ ಗೀತಾ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾ–ರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಇವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು ಸಾಮಾನ್ಯವಾಗಿ ಸಾಂಕ್ರಾಮಿಕ ರೋಗಗಳು ಒಬ್ಬರಿಂದ ಒಬ್ಬ–ರಿಗೆ ಹರಡುವಂತ ರೋಗಗಳು ಮಳೆಗಾಲದಲ್ಲಿ ಹೆಚ್ಚಾಗುವಂಥದ್ದು ಭೇದಿಯಾಗುವಂಥದ್ದು ಸೊಳ್ಳೆ ಕಡಿತದಿಂದ ಉಂಟಾಗುವ ರೋಗಗಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ದೇಹದೊಳಗೆ ವಿಷಪೂರಿತ ಆಹಾರ ಸೇವನೆಯಿಂದ ಅಶುದ್ಧ ನೀರು ಕುಡಿಯುವುದರಿಂದ ವಾಂತಿ ಮತ್ತು ಬೇದಿಯಿಂದ ದೇಹದಲ್ಲಿ ನೀರಿನ ಅಂಶ ಹಾಗೂ ಎಲೆಕ್ಟ್ರೋಲೈಟ್‌ಗಳು ವೇಗವಾಗಿ ಕಡಿಮೆಯಾಗುತ್ತವೆ ಇದರಿಂದ ಪ್ರಮುಖವಾಗಿ ನಿರ್ಜಲೀಕರಣ ಉಂಟಾಗುತ್ತದೆ ಕಾರಣವಾಗಬಹುದು ನಿಯಂತ್ರಿತ ರಕ್ತದ ಒತ್ತಡ ಮೂತ್ರಪಿಂಡದ ಸಮಸ್ಯೆ ಉಸಿರಾಟ ತೊಂದರೆ ಸೋಂಕುಗಳು ಅಥವಾ ಕಲುಷಿತ ಆಹಾರ ಸೇವನೆಯಿಂದ ಗ್ಯಾಸ್ಟ್ರೋಎಂಟ–ರೈಟಿಸ್ ನಂತಹ ಸಮಸ್ಯಗಳು ಬಂದು ಹೊಟ್ಟೆ ನೋವು ಜ್ವರ ಕಾಣಿಸಿಕೊಳ್ಳುತ್ತದೆ ಉಸಿರಾಟದ ತೊಂದರೆಯಾಗುವಂತದು ಎಂದು ಮಾಹಿತಿ ನೀಡಿದರು ನಂತರ ಶ್ರೀ ಸಂಗನಗೌಡ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾ–ರಿಗಳು ತಾಲೂಕ ಆರೋಗ್ಯ ಅಧಿಕಾ–ರಿಗಳ ಕಾರ್ಯಾಲಯ ಇವರು ಮಾತನಾಡಿ ಕುಡಿಯುವ ನೀರನ್ನು ಕುದಿಸಿ ಆರಿಸಿ ಸೋಸಿ ಕುಡಿಯಿರಿ, ಕ್ಲೋರಿನೇಶನ್ ನಿಂದ ಶುದ್ಧೀಕರಿಸಿದ

ನೀರನ್ನು ಕುಡಿಯಿರಿ ನದಿಯ ನೀರನ್ನು ನೇರವಾಗಿ ಕುಡಿಯಬಾರದು ತಾವು ವಾಸಿಸುವ ಸ್ಥಳದ ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡಿರಿ. ಮಲಮೂತ್ರ ವಿಸರ್ಜನೆಗೆ ಶೌಚಾಲಯ ಬಳಸಿರಿ ತೆರೆದಿಟ್ಟ ಆಹಾರ ಪದಾರ್ಥಗಳನ್ನು ತಿನ್ನಬಾರದು ರಸ್ತೆಯ ಅಕ್ಕಪಕ್ಕ ಕೊಯ್ದಣ್ಣ ಹಂಪಲುಗಳನ್ನು ತಿನ್ನಬಾರದು ತಿನ್ನುವ ಆಹಾರ ಪದಾರ್ಥಗಳ ಮೇಲೆ ನೊಣಗಳ ಕೂಡ ದಂತೆ ಮುನ್ನೆಚ್ಚ–ರಿಕೆ ವಹಿಸಬೇಕು ಎಂದು ತಿಳಿಸಿದರು ಊಟದ ಮೊದಲು ಶೌಚಾದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತಪ್ಪದೇ ತೊಳೀರಿ ಎಂದರು ತದನಂತರ ನಿಖಿಲ್ ತಾಲೂಕ ಎಫಿಡೊಮಾಲಜಿಸ್ಟ್ ಇವರು ಮಾತನಾಡಿ ಕುಡಿಯುವ ನೀರನ್ನು ಕನಿಷ್ಠ 20 ನಿಮಿಷಗಳ ಕಾಲ ಚೆನ್ನಾಗಿ ಕುದಿಸಿ ಆರಿಸಿದ ನಂತರ ಸೋಸಿ ಕುಡಿಯಲು ಬಳಸಿ ಓ ಆರ್ ಎಸ್ ದ್ರಾವಣ ತಯಾರಿಸಿದ ನಂತರ 24 ಗಂಟೆ ಒಳಗೆ ಬಳಸಿ ವಾಂತಿ ವೇದಿಯಾದಾಗ ಮನೆಯಲ್ಲಿ ವಾಂತಿಬೇದಿ ಆದಾಗ ಮನೆಯಲ್ಲಿ ಗಂಜಿ ಬೇಳೆತಿಳಿ,

ನಿಂಬೆ ಪಾನಕ ಎಳೆನೀರು ಕುಡುವುದನ್ನು ಮುಂದುವರಿಸಿ ಶುದ್ಧ ನೀರನ್ನು ಕುಡಿಯಿರಿ ನಂತರ ಮನೆಯಲ್ಲಿ ಸಾಕು ಪ್ರಾಣಿಗಳಾಗಿರಬಹುದು ಬೀದಿ ನಾಯಿಗಳ ಆಗಿರಬಹುದು ಕಚ್ಚಿದಾಗ ನಳದ ನೀರಿನಲ್ಲಿ ನಿರಂತರ ಗಾಯವನ್ನು ತೊಳೆಯ ಬೇಕು ತುರ್ತಾಗಿ ಚಿಕಿತ್ಸೆಯನ್ನು ಪಡೆಯಲು ತಿಳಿಸಿದರು ಎಂದು ಹೇಳಿದರು ಈ ಸಂದರ್ಭದಲ್ಲಿ ಕವಿತಾ ಕವಿತಾ ಗಂಗಮ್ಮ ಹುಲಿಗೆಮ್ಮ ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ನೇಮಕಾತಿ ಪ್ರಕಟಣೆ

## ಏಇಂ ನೇಮಕಾತಿ 2026 ? 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 22, 2026

ಏಇಂ ನೇಮಕಾತಿ 2026: 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಅಂಖ/ಆಂಖ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜೂನ್ 2026 ರ ಏಇಂ ಅಧಿಕೃತ ಅಧಿಸೂಚನೆಯ ಮೂಲಕ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22-ಜುಲೈ-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22-06-2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22-ಜುಲೈ-2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 24-07-2026 ಪರೀಕ್ಷಾ ದಿನಾಂಕ: 06ನೇ-ಸೆಪ್ಟೆಂಬರ್-2026 ಅಧಿಕೃತ ವೆಬ್‌ಸೈಟ್: cetonline.karnataka.gov.in

## ನೀಟ್ ಪರೀಕ್ಷೆ ಕುರಿತು ಸುಳ್ಳು ಸುದ್ದಿ ಹಬ್ಬಿಸಿದರೆ ಕಠಿಣ ಕ್ರಮ : ಎನ್‌ಟಿಎ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ವೈದ್ಯಕೀಯ ಪ್ರವೇಶಾತಿ ಕೋರ್ಸ್ ಗಳಿಗೆ ನಡೆದ ನೀಟ್-ಯುಜಿ 2026 ಪರೀಕ್ಷೆ ಸಂಬಂಧ ಅನಗತ್ಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿದರೆ ಅಂತವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಎಚ್ಚರಿಕೆ ನೀಡಿದೆ.




ವಿದ್ಯಾರ್ಥಿಗಳನ್ನು ವಂಚಿಸಲು ಅಥವಾ ಅವರಿಗೆ ತಪ್ಪು ಮಾಹಿತಿ ನೀಡುವುದು ಇಲ್ಲವೇ ಉದ್ದೇಶಪೂರ್ವಕವಾಗಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿದರೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸುಳ್ಳುಸು ಹಬ್ಬಿಸುವುದು ಇಲ್ಲವೇ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಗಳನ್ನು ಪ್ರಸಾರ ಮಾಡುವುದು ಗಂಭೀರ ಅಪರಾಧವಾಗಿದೆ. ಸೆಕ್ಷನ್ 14 ಸಿ ಪ್ರಕಾರ ಇಂಥವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಎನ್‌ಟಿಎ ಹಿಂದೆ ಮುಂದೆ ನೋಡುವುದಿಲ್ಲ ಎಂದು ಎಚ್ಚರಿಕೆ ಕೊಟ್ಟಿದೆ.ನಿನ್ನೆ ದೇಶದದ್ಯಾಂತ ನೀಟ್ ? ಯುಜಿ 2026 ಮರು ಪರೀಕ್ಷೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಸುಳ್ಳು ಸುದ್ದಿಗಳು ಮತ್ತು ವಿಡಿಯೋಗಳು ಹರಿದಾಡುತ್ತಿರುವುದು ನಮ ಗಮನಕ್ಕೆ ಬಂದಿದೆ. ಇದು ಸಂಪೂರ್ಣವಾಗಿ ನಕಲಿ ಮತ್ತು ಸುಳ್ಳು ಸುದ್ದಿ ಇದನ್ನು ಯಾರು ನಂಬಬಾರದೆಂದು ಮನವಿ ಮಾಡಿದೆ. ನೀಟ್ ಪರೀಕ್ಷೆಯನ್ನು ಅತ್ಯಂತ ಪಾರದರ್ಶಕತೆ, ಸಮಗ್ರಭದ್ರತೆ ಮತ್ತು ಕಣ್ಗಾವಲಿನಲ್ಲಿ ಯಶಸ್ವಿಯಾಗಿ ನಡೆಸಿದೆ. ಕೆಲವರು ದುರುದ್ದೇಶ ಪೂರ್ವಕವಾಗಿ ಸಾಮಾಜಿಕ ಜಾಲತಾಣಗಳಲ್ಲಿ ವದಂತಿಗಳನ್ನು ಹಬ್ಬಿಸುತ್ತಿದ್ದಾರೆ ಎಂದು ಸಂಸ್ಥೆಯು ಅಸಮಾಧಾನ ವ್ಯಕ್ತಪಡಿಸಿದೆ. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಧಿಕೃತವಾಗಿ ಎನ್‌ಟಿಎನ ಅಧಿಕೃತ ವೆಬ್ ಸೈಟ್ neet.nta.nic.in ಅನ್ನು ಪರಿಶೀಲಿಸಬೇಕು. ಸತ್ಯ ಸತ್ಯತೆಯನ್ನು ಪರಮಾರ್ಶೆ ಮಾಡದೆ, ಯಾವುದೇ ವದಂತಿಗಳನ್ನು ನಂಬಬೇಡಿ. ನಮ 20 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಂತ ಮತ್ತು ಸಹನೆಯಿಂದ ನಡೆದುಕೊಳ್ಳಬೇಕೆಂದು ಎನ್‌ಟಿಎ ಮನವಿ ಮಾಡಿದೆ.

# ತುಂಗಾಭದ್ರಾ ಜಲಾಶಯ ಕ್ರಸ್ಟ್ ಗೇಟು ಉದ್ಘಾಟನಾ ಸಮಾರಂಭಕ್ಕೆ ಆಂದ್ರಪ್ರದೇಶದ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಅಹ್ವಾನ



ನೈಜ್ಯ ದೆಸೆ ನ್ಯೂಸ್

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದ ಮೇರೆಗೆ ಇಂದು ಶಾಸಕ ಎನ್. ಎಸ್. ಬೋಸರಾಜು, ಶ್ರೀ ಬಸವರಾಜ ರಾಯರೆಡ್ಡಿ ಹಾಗೂ ಶ್ರೀ ಬಸನಗೌಡ ಬಾದರ್ಲಿ ಅವರು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿ, ಜೂನ್ 25ರಂದು ಮುನಿರಾಬಾದ್‌ನಲ್ಲಿ ನಡೆಯಲಿರುವ ತುಂಗಭದ್ರ ಜಲಾಶಯದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಸಮಾರಂಭಕ್ಕೆ ಆತ್ಮೀಯ ಆಹ್ವಾನ ನೀಡಿದರು.

ಭೇಟಿಯ ವೇಳೆ ತುಂಗಭದ್ರ ಜಲಾಶಯದ ಐತಿಹಾಸಿಕ ಮಹತ್ವ, ನೀರಾವರಿ ವ್ಯವಸ್ಥೆಯಲ್ಲಿ ಅದರ ಪಾತ್ರ ಹಾಗೂ ಕರ್ನಾಟಕ?-ಆಂಧ್ರಪ್ರದೇಶ ರಾಜ್ಯಗಳ ಲಕ್ಷಾಂತರ ರೈತರ ಬದುಕಿಗೆ ನೀಡುತ್ತಿರುವ ಅಪಾರ ಕೊಡುಗೆ ಕುರಿತು ಸವಿಸ್ತಾರ ಚರ್ಚೆ ನಡೆಯಿತು. ಜಲಾಶಯದ ಅಭಿವೃದ್ಧಿ ಮತ್ತು ಆಧುನೀಕರಣದಿಂದ ಎರಡೂ ರಾಜ್ಯಗಳ ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ಬಲ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತವಾಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುವಂತೆ ಕೋರಿದ ಮನವಿಗೆ ಸ್ಪಂದಿಸಿದ ಚಂದ್ರಬಾಬು ನಾಯ್ಡು ಅವರು ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸಿ, ಕಾರ್ಯಕ್ರಮಕ್ಕೆ ಆಗಮಿಸುವುದಾಗಿ ಸಮ್ಮತಿ ಸೂಚಿಸಿದರು. ಈ ಐತಿಹಾಸಿಕ ಕಾರ್ಯಕ್ರಮವು ಎರಡು ರಾಜ್ಯಗಳ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವುದಾಗಿ ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ರಾಮ್ ಮೋಹನ್ ನಾಯ್ಡು, ಶ್ರೀ ಪಿ. ಕೇಶವ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

## ಆಂಧ್ರ ಪ್ರದೇಶ ನೀರಾವರಿ ಸಚಿವರಿಗೆ ಆಹ್ವಾನ

ಆಂಧ್ರಪ್ರದೇಶ ನೀರಾವರಿ ಇಲಾಖೆ ಸಚಿವರಾದ ಶ್ರೀ ರಾಮ್ ನಾಯ್ಡು ಅವರನ್ನು ಭೇಟಿ ಮಾಡಿ, ಜೂನ್ 25ರಂದು ತುಂಗಾ ಭದ್ರಾ ಡ್ಯಾಂದಲ್ಲಿ ನಡೆಯಲಿರುವ ಕ್ರಸ್ಟ್ ಗೇಟುಗಳ ಉದ್ಘಾಟನಾ ಸಮಾರಂಭಕ್ಕೆ ಅಧಿಕೃತ ಆಹ್ವಾನ ನೀಡಿದರು. ತುಂಗಭದ್ರ ಜಲಾಶಯವು ಕರ್ನಾಟಕ ಹಾಗೂ ಆಂಧ್ರಪ್ರದೇಶದ ರೈತರ ಜೀವನಾಡಿಯಾಗಿದ್ದು, ಕೃಷಿ ಚಟುವಟಿಕೆಗಳಿಗೆ ಮಹತ್ವದ ನೀರಾವರಿ ಮೂಲವಾಗಿದೆ. ಜಲಾಶಯದ ಕ್ರಸ್ಟ್ ಗೇಟುಗಳ ಉದ್ಘಾಟನೆ ನೀರಿನ ನಿರ್ವಹಣೆಯನ್ನು ಇನ್ನಷ್ಟು ಸುಧಾರಿಸುವುದರ ಜೊತೆಗೆ ರೈತರಿಗೆ ಅಗತ್ಯ ಸಮಯದಲ್ಲಿ ನೀರು ಪೂರೈಕೆ ಮಾಡಲು ಸಹಕಾರಿಯಾಗಲಿದೆ ಎಂದು ನಾಯಕರು ತಿಳಿಸಿದರು.

ಭೇಟಿಯ ಸಂದರ್ಭದಲ್ಲಿ ಎರಡೂ ರಾಜ್ಯಗಳ ನೀರಾವರಿ ಸಂಬಂಧಿತ ವಿಷಯಗಳು, ಜಲ ಹಂಚಿಕೆ, ರೈತರ ಹಿತಾಸಕ್ತಿ ಹಾಗೂ ಭವಿಷ್ಯದ ಅಭಿವೃದ್ಧಿ ಯೋಜನೆಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು. ಗಡಿ ಭಾಗದ ರೈತರ ಸಮಸ್ಯೆಗಳಿಗೆ ಆದ್ಯತೆ ನೀಡುವ ಅಗತ್ಯವಿದೆ ಎಂಬುದರ ಬಗ್ಗೆ ಸಹ ಅಭಿಪ್ರಾಯ ಹಂಚಿಕೊಳ್ಳಲಾಯಿತು. ಸಚಿವರಾದ ಶ್ರೀ ರಾಮ್ ನಾಯ್ಡು ಅವರು ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸಿ, ಸಮಾರಂಭದಲ್ಲಿ ಭಾಗವಹಿಸಲು ಸಕಾರಾತ್ಮಕ ಸ್ಪಂದನೆ ನೀಡಿದರು. ಈ ಭೇಟಿ ಕರ್ನಾಟಕ?ಆಂಧ್ರಪ್ರದೇಶ ನಡುವಿನ ಉತ್ತಮ ಬಾಂಧವ್ಯ ಮತ್ತು ಪರಸ್ಪರ ಸಹಕಾರದ ಸಂಕೇತವಾಗಿ ಪರಿಣಮಿಸಿತು.



# ತುರ್ವಿಹಾಳ ಪಿಎಸ್‌ಐ ಸುಜಾತ ವಕೀಲನಿಗೆ ಕಪಾಳ ಮೋಕ್ಷ, ವಕೀಲರ ಸಂಘದಿಂದ ಡಿವೈಎಸ್ಪಿಗೆ ಮನವಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ತುರ್ವಿಹಾಳ ಪಟ್ಟಣ ಪೊಲೀಸ್ ಠಾಣೆಯ ಪಿಎಸ್‌ಐ ಸುಜಾತ ಅವರು ವಕೀಲರಾದ ಹರಳಯ್ಯ ಅವರಿಗೆ ಅವಾಚ್ಯ ಶಬ್ದದಿಂದ ನಿಂದಿಸಿ, ಕಪಾಳಕ್ಕೆ ಹೊಡೆದು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿ, ಪಿಎಸ್‌ಐ ಸುಜಾತ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ತಾಲೂಕು ವಕೀಲರ ಸಂಘದಿಂದ ಡಿವೈ-ಎಸ್ಪಿ ಚಂದ್ರಶೇಖರ ಜಿ ಅವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.

ಜೂ.22 ಸೋಮವಾರ ಬೆಳಿಗ್ಗೆ 8:45ರ ಸುಮಾರಿಗೆ ನನ್ನ ಸಹೋದರನಾದ ಸೋಮನಾಥರ ಸಹಿಯನ್ನು ಪಿಎಸ್‌ಐ ಸುಜಾತ ಮತ್ತು ಪೊಲೀಸ್ ಸಿಬ್ಬಂದಿಗಳು ಖಾಲಿ ವೈಟ್ ಪೇಪರ್ ಮೇಲೆ ಸಹಿ



ಮಾಡಿಸಿಕೊಂಡು ಹೋಗಿದ್ದನ್ನ ಸಹೋದರ ವಕೀಲರಾದ ಹರಳಯ್ಯ ಅವರಿಗೆ ತಿಳಿಸಿದ್ದಾನೆ, ವಕೀಲ ಹರಳಯ್ಯ ಬೆಳಿಗ್ಗೆ 9 ಗಂಟೆಗೆ ತುರ್ವಿಹಾಳ ಪೊಲೀಸ್ ಠಾಣೆಗೆ ಹೋಗಿ ಪಿಎಸ್‌ಐ ಸೇರಿದಂತೆ ಇತರೆ 3 ಜನ ಪೊಲೀಸ್ ಸಿಬ್ಬಂದಿಯನ್ನು ವಿಚಾರಿಸಿ ನಾನು ವಕೀಲ ಇದ್ದೇನೆ ಎಂದು ಹೇಳಿ, ನನ್ನ ಸಹೋದರನ ಜೊತೆ ಖಾಲಿ ವೈಟ್ ಪೇಪರ್ ಮೇಲೆ ಯಾಕೆ ಸಹಿ ಮಾಡಿಸಿಕೊಂಡಿದ್ದೀರಿ, ಎಂದು ಪ್ರಶ್ನಿಸಿದಾಗ ಪಿಎಸ್‌ಐ ಸುಜಾತ ಅವರು ನನಗೆ ಅವಾಚ್ಯ ಶಬ್ದಗಳಿಂದ ಬೈದು, ನೀನು ಯಾವಸೀಮೆ ವಕೀಲನೋ ಎಂದು ಕಪಾಳಕ್ಕೆ ಹೊಡೆದು ಬೆದರಿಕೆ ಹಾಕಿದ್ದಾರೆ.

ಎಂದು ದೂರಿ ಸಿಂಧನೂರಿನ ಡಿವೈ-ಎಸ್ಪಿ ಜಿ.ಚಂದ್ರಶೇಖರ ಅವರಿಗೆ ತಾಲೂಕು ವಕೀಲರ ಸಂಘ ಸೂಕ್ತ ಕ್ರಮ ತೆಗೆದುಕೊಂಡು ಪಿಎಸ್‌ಐ ಸುಜಾತ ಅವರನ್ನು ಅಮಾನತು ಮಾಡಬೇಕು ಹಾಗೂ ನನಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ವಕೀಲ ಹರಳಯ್ಯ ದೂರಿನಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ: ವಕೀಲರ ಸಂಘದ ತಾಲೂಕು ಅಧ್ಯಕ್ಷ ಭೀಮಣ್ಣ ವಕೀಲರು, ಸೇರಿದಂತೆ ಸಂಘದ ಪದಾಧಿಕಾರಿಗಳು ಇದ್ದರು.

# ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪರಿಶೀಲನೆ ಕಾರ್ಯವೂ ಮುಕ್ತಾಯದ ಹಂತಕ್ಕೆ ತಲುಪಿದೆ: ಜಿಲ್ಲಾಧಿಕಾರಿ ಪೂವಿತಾ

ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 22 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿಗಳನ್ನು ಪಡೆಯಲು ಅರ್ಹರಾಗಿರುವಂತವರಿಗೆ ಪಿಂಚಣಿಗಳನ್ನು ಮಂಜೂರು ಮಾಡಲೂ ಹಾಗೂ ಪಿಂಚಣಿಗಳನ್ನು ಪಡೆಯುತ್ತಿರುವ ಫಲಾನುಭವಿಗಳ ಪೈಕಿ ಪರಿಶೀಲನೆ ಮಾಡಲು ರಾಯಚೂರು ಜಿಲ್ಲೆಗೆ 1,01,250 ಪ್ರಕರಣಗಳ ಸಂಶಯಾಸ್ಪದವಾಗಿ ಪಡೆಯುತ್ತಿರುವ ಫಲಾನುಭವಿಗಳ ಸಂಯೋಜನೆ ಆಪ್ ಮೂಲಕ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಹಶೀಲ್ದಾರರ ಮೇಲ್ವಿಚಾರಣೆಯಲ್ಲಿ ಪರಿಶೀಲನೆ ಕಾರ್ಯ ನಡೆದಿದ್ದು, ಪರಿಶೀಲನೆ ಕಾರ್ಯವು ಮುಕ್ತಾಯದ ಹಂತದಲ್ಲಿರುತ್ತದೆ ಎಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ತಿಳಿಸಿದ್ದಾರೆ.

ಜಿಲ್ಲೆಯ ಅರಕೇರಾ ತಾಲೂಕಿನಲ್ಲಿ 11,349 ಅರ್ಜಿಗಳ ಪೈಕಿ 10,591 ಅರ್ಜಿಗಳನ್ನು ಪರಿಶೀಲಿಸಲಾಗಿದೆ. 758 ಅರ್ಜಿಗಳು ಬಾಕಿ ಉಳಿದಿದ್ದು, ಶೇ.93.32ರಷ್ಟು ಪ್ರಗತಿ ಸಾಧಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ 13,171 ಅರ್ಜಿಗಳ ಪೈಕಿ 12,177 ಅರ್ಜಿಗಳನ್ನು ಪರಿಶೀಲಿಸಲಾಗಿದೆ. 993 ಅರ್ಜಿಗಳು ಬಾಕಿ ಉಳಿದಿದ್ದು, ಶೇ.92.46ರಷ್ಟು ಪ್ರಗತಿ ಸಾಧಿಸಲಾಗಿದೆ. ಲಿಂಗಸುಗೂರು ತಾಲೂಕಿನಲ್ಲಿ 11,938 ಅರ್ಜಿಗಳ ಪೈಕಿ 11,483 ಅರ್ಜಿಗಳನ್ನು ಪರಿಶೀಲಿಸಲಾಗಿದೆ. 455 ಅರ್ಜಿಗಳು ಬಾಕಿ ಉಳಿದಿದ್ದು, ಶೇ.96.19ರಷ್ಟು ಪ್ರಗತಿ ಸಾಧಿಸಲಾಗಿದೆ. ಮಾನ್ವಿ ತಾಲೂಕಿನಲ್ಲಿ 15,186 ಅರ್ಜಿಗಳ ಪೈಕಿ 15,186 ಅರ್ಜಿಗಳನ್ನು ಪರಿಶೀಲಿಸಲಾಗಿದೆ.



ಯಾವುದೇ ಅರ್ಜಿಗಳು ಬಾಕಿ ಉಳಿದಿಲ್ಲ. ಶೇ.100ರಷ್ಟು ಪ್ರಗತಿ ಸಾಧಿಸಲಾಗಿದೆ. ಮಸ್ಕಿ ತಾಲೂಕಿನಲ್ಲಿ 7763 ಅರ್ಜಿಗಳ ಪೈಕಿ 7412 ಅರ್ಜಿಗಳನ್ನು ಪರಿಶೀಲಿಸಲಾಗಿದೆ.

351ಅರ್ಜಿಗಳು ಬಾಕಿ ಉಳಿದಿದ್ದು, ಶೇ.95.48ರಷ್ಟು ಪ್ರಗತಿ ಸಾಧಿಸಲಾಗಿದೆ. ರಾಯಚೂರು ತಾಲೂಕಿನಲ್ಲಿ 21,341 ಅರ್ಜಿಗಳ ಪೈಕಿ 20,995 ಅರ್ಜಿಗಳನ್ನು ಪರಿಶೀಲಿಸಲಾಗಿದೆ. 346 ಅರ್ಜಿಗಳು ಬಾಕಿ ಉಳಿದಿದ್ದು, ಶೇ.98.38ರಷ್ಟು ಪ್ರಗತಿ ಸಾಧಿಸಲಾಗಿದೆ. ಸಿಂಧನೂರು ತಾಲೂಕಿನಲ್ಲಿ 11,328 ಅರ್ಜಿಗಳ ಪೈಕಿ 11,325 ಅರ್ಜಿಗಳನ್ನು ಪರಿಶೀಲಿಸಲಾಗಿದೆ.

3 ಅರ್ಜಿಗಳು ಬಾಕಿ ಉಳಿದಿದ್ದು, ಶೇ.99.97ರಷ್ಟು ಪ್ರಗತಿ ಸಾಧಿಸಲಾಗಿದೆ. ಸಿರವಾರ ತಾಲೂಕಿನಲ್ಲಿ 9,175 ಅರ್ಜಿಗಳ ಪೈಕಿ 9,175 ಅರ್ಜಿಗಳನ್ನು ಪರಿಶೀಲಿಸಲಾಗಿದೆ. ಯಾವುದೇ ಅರ್ಜಿಗಳು ಬಾಕಿ ಉಳಿದಿಲ್ಲ. ಶೇ.100ರಷ್ಟು ಪ್ರಗತಿ ಸಾಧಿಸಲಾಗಿದ್ದು, ಒಟ್ಟಾರೆಯಾಗಿ ಜಿಲ್ಲೆಯಲ್ಲಿ 1,01,251 ಅರ್ಜಿಗಳ ಪೈಕಿ 98,344 ಅರ್ಜಿಗಳನ್ನು ಪರಿಶೀಲಿಸಲಾಗಿದೆ. 2,906 ಅರ್ಜಿಗಳು ಬಾಕಿ ಉಳಿದಿದ್ದು, ಶೇ.96.98 ರಷ್ಟು ಪ್ರಗತಿ ಸಾಧಿಸಲಾಗಿದೆ. ಈ ಪ್ರಗತಿ ಸಂಬಂಧಿಸಿದ ತಹಶೀಲ್ದಾರರ ಮೇಲ್ವಿಚಾರಣೆಯಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಮನೆ ಮನೆಗೆ ಭೇಟಿ ನಿಡಿ ಸಂಯೋಜನೆ ಮೊಬೈಲ್ ಆಪ್ ಮೂಲಕ 98,345 ಪರಿಶೀಲನೆ ಮಾಡಿದಾಗ 7,602 ಅರ್ಜಿ ಮುಂದುವದಿವೆ.

90,743 ಅರ್ಜಿ ಸ್ಥಗಿತಗೊಂಡಿದ್ದು, 2,906 ಅರ್ಜಿ ಬಾಕಿವೆ. ಮೊಬೈಲ್ ಆಪ್ ಮೂಲಕ ಪರಿಶೀಲನೆ ಕಾರ್ಯದಲ್ಲಿ ಕ್ಷೇತ್ರ ಕಾರ್ಯಕ್ಕೆ ಬಂದಾಗ ಮೇಲಿನ ಪ್ರಗತಿ ವರದಿಯಲ್ಲಿರುವಂತೆ ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಮನೆಗೆ ಭೇಟಿ ನೀಡಿದಾಗ, ವಿಳಾಸದಲ್ಲಿ ವಾಸ ವಿರುವುದಿಲ್ಲ. ಅಥವಾ ಆದಾಯ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಹಾಗೂ ಪಿಂಚಣಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳು ಸಲ್ಲಿಸದೆ ಇರುವ ಕಾರಣಗಳಿಂದ ಸ್ಥಗಿತಗೊಳಿಸಲಾಗಿದೆ. ಸ್ಥಗಿತ ಎಂದು ಬಂದ ಫಲಾನುಭವಿಗಳ ಪಿಂಚಣಿಯ ಸ್ಥಿತಿಯಲ್ಲಿ ರನ್ನಿಂಗ್ ಎಂದು ಇರುತ್ತದೆ. ಕೊನೆಯ ಸಾಲಿನಲ್ಲಿ ಡೊಬ್ಲಿಕೇಟ್ ನಲ್ಲಿ ಎಸ್ ಎಂದು ತೋರಿಸುತ್ತದೆ. ಇಂತಹ ಫಲಾನುಭವಿಗಳಿಗೆ, ಆಯುಕ್ತರು ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಸಾಮಾಜಿಕ ರವರ ಭದ್ರತೆ & ಕಂದಾಯ ಪಿಂಚಣಿಗಳು ಇಲಾಖೆ ಬೆಂಗಳೂರು ಇವರ ವತಿಯಿಂದ ತಹಶೀಲ್ದಾರರಿಂದ ಫಲಾನುಭವಿಗಳಿಗೆ ತಿಳುವಳಿಕೆ ಪತ್ರ ನೀಡಿ 30 ದಿನಗಳ ಒಳಗಾಗಿ ಅಗತ್ಯ ದಾಖಲಾತಿಗಳು ಸಲ್ಲಿಸಲೂ ಕಾಲಾವಕಾಶ ನೀಡಿರುತ್ತಾರೆ. 30 ದಿನಗಳ ಒಳಗಾಗಿ ಅಗತ್ಯ ದಾಖಲಾತಿಗಳನ್ನು ಸಂಬಂಧಿಸಿದ ತಹಶೀಲ್ದಾರರಿಗೆ ಸಲ್ಲಿಸಿದ ಫಲಾನುಭವಿಗಳ ಪಿಂಚಣಿಗಳ ಬಗ್ಗೆ, ನಿಯಮಾನುಸಾರ ಕ್ರಮ ಕೈಗೊಳ್ಳಲೂ ಈಗಾಗಲೇ ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗಿದ್ದು, ರಾಯಚೂರು ಜಿಲ್ಲೆಯ ಸ್ಥಗಿತ ಹೊಂದಿದ ಎಲ್ಲಾ ಪಿಂಚಣಿದಾರರು ಈ ಅವಕಾಶವನ್ನು ಸದುಪಯೊಗಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಸತಿ ನಿವೇಶನ ಸಮಸ್ಯೆ,ಮೂಲಭೂತ ಸೌಲಭ್ಯ ಒದಗಿಸಲು ಅರಕೇರಾ ಗ್ರಾ.ಪಂ. ಮುಂದೆ ಪ್ರತಿಭಟನೆ : ತಾಲೂಕು ಸಂಚಾಲಕರಾದ ಶಿವಪ್ಪ ಪಲಕನಮರಡಿ

ನೈಜ್ಯ ದೆಸೆ ನ್ಯೂಸ್

ಅರಕೇರಾ: ಸುಮಾರು 4-5 ವರ್ಷಗಳಿಂದ ಅರಕೇರಾ ತಾಲೂಕು ಕೇಂದ್ರವಾಗಿದ್ದರು ಸಹ ಇಲ್ಲಿ ಅನೇಕ ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಾಯಿದೆ. ನಿವೇಶ ಮತ್ತು ವಸತಿ ವಸತಿಗಾಗಿ ನಿವೇಶನ ಕೊಡಬೇಕು ಅಂತ ಹೇಳಿ ನಾವು ಹೋರಾಟ ಮಾಡಿದ್ದೇವು,ಕಳೆದ ಡಿಸೆಂಬರ ಅಲ್ಲಿ ಹೋರಾಟ ಮಾಡುವಾಗ ಅಲ್ಪಸ್ವಲ್ಪ ಇಲಾಖೆಗಳು ಆಗುತ್ತಾಬಂದಿವೆ.

ತಹಶೀಲ್ದಾರವರಿಗೆ ನಮ್ಮ ಬೇಡಿಕೆಗಳ ಬಗ್ಗೆ ಮನವಿಮಾಡಿಕೊಂಡಾಗ ಬೇಡಿಕೆಗಳ ಬಗ್ಗೆ ಇಡೇರಿಸುವುದಾಗಿ ಭರವಸೆ ಕೊಟ್ಟಿದ್ದಾರೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕರಾದ ಶಿವಪ್ಪ ಪಲಕನಮರಡಿ ಹೇಳೀದರು. ಅವರು ಅರಕೇರಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಉದ್ದೇಶಿಸಿಮಾತನಾಡಿದ ಅವರು ಬಡತನ ರೇಖೆಯೋಳಗಿನ ಕೂಲಿಕಾರ್ಮಿಕರು,ಬೀದಿಬದಿ ವ್ಯಾಪರಸ್ಥರು ಆರ್ಥಿಕವಾಗಿ ತೀರಾ ಹಿಂದುಳಿದ ಕುಟುಂಬಸ್ಥರು ಒಂದೇ ಮನೆಯಲ್ಲಿ 2-3 ಕುಟುಂಬಗಳು ವಯೋವೃದ್ದ ತಂದೆ ತಾಯಿ ಹಾಗೂ ಮಕ್ಕಳೊಂದಿಗೆ ವಾಸಮಾಡುತ್ತಿದ್ದಾರೆ. ಇಂತಹ ಕುಟುಂಬಗಳು ಖಾಸಗಿ ನಿವೇಶ ಖರೀದಿಸಿ ಪ್ರತ್ಯಕ ಸ್ವಂತದೊಂದು ವಸತಿ ನಿರ್ಮಿಸಿಕೊಳ್ಳಲು ಸಾದ್ಯವಾಗದೇ ವಸತಿ ಸಮಸ್ಯೆ ಎದುರಾಗಿ ಊರುಬಿಟ್ಟು ವಲಸೆ




ಹೋಗುವಂತ ದುಸ್ಥಿತಿ ನಿರ್ಮಾಣವಾಗಿದೆ ಎಂದರು.

ಅರಕೇರಾ ಗ್ರಾಮಪಂಚಾಯತ ವ್ಯಾಪ್ತಿಯ ನಿವೇಶ ರಹಿತ ಮತ್ತು ವಸತಿ ರಹಿತರು ನಿವೇಶನಕೋರಿ ಅರ್ಜಿ ಸಲ್ಲಿಸಿದರೂ ಈವರಗೆ ನಿವೇಶನ ರಹಿತರ ಸಂಖ್ಯೆಗೆ ಅನುಗುಣವಾಗಿ ಸರಕಾರಿ ಭೂಮಿ ಗುರುತಿಸಿ ಅಥವಾ ಖಾಸಗಿ ಭೂಮಿ ಖರಿಧಿಸಿ ವಸತಿ ಬಡವಾಣೆ ರಚಿಸಿ ನಿವೇಶ ರಹಿತರಿಗೆ ಹಕ್ಕುಪತ್ರಗಳನ್ನು ವಿತರಿಸುವಂತೆ. ಗ್ರಾಮ ಪಮಚಾಯತಿಗೆ ಮನವಿ ಸಲ್ಲಿಸಿದರೂ ಸಹಿತ ಇದುವರಿಗೂ ಯಾವುದೇ ವಸತಿ ನಿವೇಶನಕ್ಕಾಗಿ ಭೂಮಿ ಗುರುತಿಸಿ ನಿವೇಶನ ಸಮಸ್ಯಗೆ ಪರಿಹಾರ ಒದಗಿಸಲುವಿಫಲವಾಗಿರುವದರಿಂದ ದಿನಾಂಕ 24-6-2026ರಂದು ವಸತಿ ರಹಿತ ಹಾಗೂ ನಿವೇಶನ ರಹಿತ ಬಡವರೊಂದಿಗೆ ಮೂಲಭೂತ ಸೌಕರ್ಯಗಳಿಗಾಗಿ ಒತ್ತಾಯಿಸಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆಂದು ಎಂದರು.

ಕೆಲವೊಂದು ದೊಡ್ಡಿಗಳಿಗೆ ಇನ್ನೂ ಸರಿಯಾದ ರಸ್ತೆಯು ಆಗಿಲ್ಲ ಗರ್ಬಿಣಿ ಮಹಿಳೆಯರು ಹೇರಿಗೆ ಸಂದರ್ಭದಲ್ಲಿ ಆಸ್ಪತ್ರೆಗೆ ಹೋಗಬೇಕಾದರೆ ಅಂಬುಲೈನ್ಸ ಹೋಗಲು ದಾರಿಯಿಲ್ಲದಾಗಿದೆ ಸಾಕಷ್ಟು ಹಣ ಅಭಿವೃದ್ಧಿಗೆ ಬಂದರೂ ಇಲ್ಲಿ ಯಾವುದೇ ರಸ್ತೆ ಅಭಿವೃದ್ಧಿಯಾಗದೇ ಇರುವದು ಮಹಿಳೆಯರು ಇಡೀ ಶಾಪಹಾಕುತ್ತಿದ್ದಾರೆ. ಅರಕೇರಾ ಸುತ್ತಮುತ್ತಲ್ಲಿನ ಗ್ರಾಮದ ವಿದ್ಯಾರ್ಥಿಗಳು ಕಾಲೇಜು ಮುಗಿದ ಬಳಿಕ ಡಿಗ್ರಿ ಓದಲು ನಗರ ಪ್ರದೇಶಕ್ಕೆ ಹೋಗಬೇಕಾದ ಪರಿಸ್ಥಿತಿ ಬಂದಿದೆ ಅರಕೇರಾ ಪಟ್ಟಣದಲ್ಲಿ ಡಿಗ್ರಿಕಾಲೇಜು ಮಂಜೂರು ಮಾಡಿಸಿ ವಿದ್ಯಾರ್ಥಿಗಳಿಗೆ ಅನೂಕೂಲಮಾಡಿಕೊಡಲು ನಮ್ಮ ಸಂಘಟನೆಯು ಹೋರಾಟಮಾಡಲು ಸಿದ್ದರಿದ್ದೇವೆಂದರು.

ನಮ್ಮ ಹೋರಾಟದಿಂದಾ ಹೆರುಂಡಿ ಗ್ರಾಮದಲ್ಲಿ 109ಸೈಟ ನೀಡಲಾಗಿದೆ ನಿಂಗದಳ್ಳಿ 12 ಎಕರೆ ಜಮೀನಿನನ್ನು ದೇಸಾಯಿಯವರು ಕೊಟ್ಟಿರತಕ್ಕಂತಹ ಜಮೀನು ಯಾರುಮುಟ್ಟಕ್ಕೆ ಆಗಲ್ಲ ಅಂದರು ಸಾಗುವಳಿ ಮಾಡಕ್ಕೆ ಆಗಲ ಅಂದರು.ನಾವು ಹೋರಾಟ ಮಾಡಿದ ನಂತರ 12 ಎಕರೆಯನ್ನು ಜಮ್ಮೀನಿನಲ್ಲಿ ಕಿತ್ತಿ ಅದನ್ನು ಸ್ವಚ್ಚಪಡಿಸಿ ಇಂದು ಲೇಔಟ ಮಾಡಿದೀವಿ, ಮಸರಕಲ್ ಗ್ರಾಮದಲ್ಲಿ 300ಕೂಹೆಚ್ಚು ಜನ ಫಲಾನುಭವಿಗಳಿಗೆ ಗ್ರಾಮಸಭೆ ಮಾಡಿ ತಹಶಿಲ್ದಾರರು ಇಓ ಪಿಡಿಓ ಸ್ವಚ್ಚತೆ ಮಾಡಿ ತಕ್ಷಣ ಅಚ್ಚುಕಟ್ಟಾಗಿ ನಿವೇಶನ ಮಾಡಲಾಗುವುದು.

### ಬೇಡಿಕೆಗಳು:

1)ವಸತಿ ನಿವೇಶನ ಕೋರಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ ವಸತಿ ರಹಿತ ಬಡವರಿಗೆ ಗ್ರಾಮದ ಸರಕಾರಿ ಭೂಮಿ ಸರ್ವೆನಂಬರ39ರಲ್ಲಿ 83-30 ಎಕರೆ ಈ ಪೈಕಿ 25 ಎಕರೆ ವಸತಿಗೆ ಯೋಗ್ಯವಾದ ಭೂಮಿ ಮಂಜೂರು ಮಾಡಬೇಕು.
2)ನಿವೇಶ ಸೌಲಭ್ಯ ಹೊಂದಿದೆ ಎಸ್ ಸಿ ಎಸ್ ಟಿ ಜನಾಂಗದ ವಸತಿ ರಹಿತ ಬಡವರಿಗೆ ವಸತಿ ನಿರ್ಮಾಣಕ್ಕಾಗಿ ಎಸ್ ಸಿ ಎಸ್ ಪಿ ಟಿ ಎಸ್ ಪಿ ಅನುಧಾನದಲ್ಲಿ ತಲಾ ರೂ 5ಲಕ್ಷರೂ ಆರ್ಥೀಕ ನೆರವು
3) ಸರಕಾರಿ ಗಾಯರಾಣ ಭೂಮಿಯಲ್ಲಿ ಅನಧಿಕೃತ ಸಾಗುವಳಿದಾರರು ಸಲ್ಲಿಸಿದ ನಮೂನೆ 57ರಡಿ ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು ಮರುಪರಿಶೀಲನೆ ಮಾಡಿ ಮಂಜೂರು ಮಾಡಬೇಕು.
4) ಅರಕೇರಾ ಗ್ರಾಮದ ಸರ್ವೆ ನಂಬರ 164ರಲ್ಲಿ 46-10 ಎಕರೆ-ಗುಂಟೆ ಸರಕಾರಿ ಭೂಮಿಯಲ್ಲಿ 5ಎಕರೆ ಭೂಮಿಯನ್ನು ಸಾರ್ವಜನಿಕ ರುದ್ರಭೂಮಿಗಾಗಿ ಡಿಸಿಯವರಿಗೆ ಪ್ರಸ್ತಾವನೆ ಸಲ್ಲಿಸಬೇಕು.
5) ಕರಡೋಣ ಗ್ರಾಮದ ಸರ್ವೆ ನಂಬರ 16 ರಲ್ಲಿ 9-15 ಎಕರೆ ಗಾಯರಾಣ ಬೂಮಿಯ ಪೈಕಿ 1 ಎಕರೆ ರುದ್ರಭೂಮಿಗಾಗಿ ಕಾಯ್ದಿರಸಲಾಗಿದ್ದು ಹದ್ದು ಬಸ್ತು ಮಾಡಬೇಕು.
6) ಹಾಳಜಾಡಲದಿನ್ನಿ ಸರ್ವೆ ನಂಬರ4ರಲ್ಲಿ 4 ಎಕರೆ 8ಗುಂಟೆ ಭೂಮಿಯಲ್ಲಿ 1 ಎಕರೆ ಡಾ.ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಮಂಜೂರು ಮಾಡಬೇಕು
7) ನಾಗೋಲಿ ಗ್ರಾಮದ ಸರ್ವೆನಂಬರ 21 ರಲ್ಲಿ ವಸತಿ ನಿವೇಶನಕ್ಕಾಗಿ ಮಂಜೂರಿಯಾದ 5ಎಕರೆ ಭೂಮಿ ಹದ್ದುಬಸ್ಸತು ಮಾಡಿ ವಸತಿ ಬಡಾವಣೆ ರಚಿಸಿ ನಿವೇಶನ ರಹಿತರಿಗೆ ಹಕ್ಕುಪತ್ರ ವಿತರಿಸಬೇಕು.

ಸಂದರ್ಭದಲ್ಲಿ ಶಿವಪ್ಪ ಪಲಕನಮರಡಿ ತಾಲೂಕು ಸಂಚಾಲಕರು, ನಾಗರಾಜ ಬೇರಿ ಅರಕೇರಾ, ಶಿವರಾಜ ಕೋರಿ ಗಣಜಲಿ, ಯೇಸು ಮಸರಕಲ್, ಬೂದೆಪ್ಪ ಗಬ್ಬೂರು ಜಿಲ್ಲಾ ಮುಖಂಡರು, ರಮೇಶಭಾವಿಮನಿ ಜಾಲಹಳ್ಳಿ,ಬಸವರಾಜ ಹುಲಿಗುಡ್ಡ, ರವಿಕುಮಾರ ಹಾಳಜಾಡಲದಿನ್ನಿ ಹುಲ್ಲೇಶ ಕಾಕರಗಲ್,ಚನ್ನಮ್ಮ ಆಲ್ಕೋಡ. ಸಲಿಂ ತಾಲೂಕು ಸಂಚಾಲಕರು ಅರಕೇರಾ, ಆಂಜನೇಯ್ಯ ಅರಕೇರಾ ಹನುಮಂತ ಟೈಲರ್ ಅರಕೇರಾ, ಮುಂತಾದವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ವುಡ್ ವರ್ಕ್ ಟೆಕ್ನಿಷಿಯನ್

ಕೋರ್ಸ್ ಮರಗೆಲಸ ಮತ್ತು ಪೀಠೋಪಕರಣಗಳ ತಯಾರಿಕೆಯಲ್ಲಿ ವೃತ್ತಿಪರ ಕೌಶಲ್ಯವನ್ನು ನೀಡುವ ಒಂದು ವರ್ಷದ ವೃತ್ತಿಪರ (ITI) ತರಬೇತಿ ಕೋರ್ಸ್ ಆಗಿದೆ. ಮರದ ವಿನ್ಯಾಸ, ಕತ್ತರಿಸುವುದು, ಜೋಡಿಸುವುದು ಮತ್ತು ಆಧುನಿಕ ಯಂತ್ರಗಳ ಸುರಕ್ಷಿತ ಬಳಕೆಯ ಬಗ್ಗೆ ಸಂಪೂರ್ಣ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ಜ್ಞಾನವನ್ನು ಇದು ಒಳಗೊಂಡಿದೆ. ಕೋರ್ಸ್‌ನ ಪ್ರಮುಖ ವಿವರಗಳು೧. ಕೋರ್ಸ್‌ನ ಅವಧಿ ಮತ್ತು ಅರ್ಹತೆಕಾಲಾವಧಿ: ೧ ವರ್ಷಅರ್ಹತೆ: ಕನಿಷ್ಠ ೮ನೇ ಅಥವಾ ೧೦ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು.ಪ್ರಮಾಣೀಕರಣ: ಕೋರ್ಸ್ ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಡಿಜಿಟಿ (DGT) ಯಿಂದ ರಾಷ್ಟ್ರೀಯ ವ್ಯಾಪಾರ ಪ್ರಮಾಣಪತ್ರ (NTC) ನೀಡಲಾಗುತ್ತದೆ. ಮರಗೆಲಸದ ಯಂತ್ರಗಳನ್ನು ಸುರಕ್ಷಿತವಾಗಿ ನಿರ್ವಹಿಸುವುದು ಮತ್ತು ರಕ್ಷಣಾ ಸಾಧನಗಳನ್ನು ಬಳಸುವುದು.ಉಪಕರಣಗಳ ಬಳಕೆ: ಮರವನ್ನು ಅಳೆಯುವುದು, ಗುರುತು ಮಾಡುವುದು, ಕತ್ತರಿಸುವುದು ಮತ್ತು ಆಕಾರ ನೀಡುವುದು.ಮರದ ಕೀಲುಗಳು (Wood Joints): ಡೊವೆಲ್‌ಗಳು, ಮೊರ್ಟೈಸ್ ಮತ್ತು ಟೆನಾನ್ (Mortise and Tenon), ಮತ್ತು ಡಾವ್‌ಟೈಲ್ (Dovetail) ಕೀಲುಗಳನ್ನು ತಯಾರಿಸುವುದು.ಆಧುನಿಕ ಯಂತ್ರಗಳ ಬಳಕೆ: ಸರ್ಕ್ಯುಲರ್ ಪ್ಲಾನರ್ , ಮತ್ತು ರೂಟರ್ ನಂತಹ ಯಂತ್ರಗಳನ್ನು ನಿರ್ವಹಿಸುವುದು.ಫರ್ನಿಚರ್ ವಿನ್ಯಾಸ: ಡ್ರಾಯಿಂಗ್‌ಗಳನ್ನು ಓದುವುದು ಮತ್ತು ಅರ್ಥೈಸಿಕೊಳ್ಳುವುದು, ಆಧುನಿಕ ಮತ್ತು ಸಾಂಪ್ರದಾಯಿಕ ಪೀಠೋಪಕರಣಗಳನ್ನು ವಿನ್ಯಾಸಗೊಳಿಸುವುದು ಮತ್ತು ನಿರ್ಮಿಸುವುದು.ಫಿಟ್ಟಿಂಗ್ಸ್ ಮತ್ತು ಫಿನಿಶಿಂಗ್: ಮರಕ್ಕೆ ಬಣ್ಣ ಬಳಿಯುವುದು, ಪಾಲಿಶ್ ಮಾಡುವುದು ಮತ್ತು ಹಿಂಜ್‌ಗಳಂತಹ ಹಾರ್ಡ್‌ವೇರ್ ಫಿಟ್ಟಿಂಗ್‌ಗಳನ್ನು ಅಳವಡಿಸುವುದು.೩. ಉದ್ಯೋಗಾವಕಾಶಗಳುಪೀಠೋಪಕರಣ ತಯಾರಿಕಾ ಕಾರ್ಖಾನೆಗಳು ಒಳಾಂಗಣ ವಿನ್ಯಾಸ ಸಂಸ್ಥೆಗಳುಮರ ಆಧಾರಿತ ಉದ್ಯಮಗಳು ಮತ್ತು ಸ್ವಾವಲಂಬಿಯಾಗಿ ಸ್ವಂತ ಮರಗೆಲಸದ ಅಂಗಡಿ ತೆರೆಯಬಹುದು.

## ಗುಂಡಿಕ್ಕಿ ಆರೋಪಿ ಸೆರೆ

❑ ನೈಜ್ಯ ದೆಸೆ ನ್ಯೂಸ್

**ಭೀಮಾತೀರದಲ್ಲಿ 6 ಮಂದಿಯ ಭೀಕರ ಕೊಲೆಯ ಭಯಾನಕ ಘಟನೆ ಸಂಬಂಧ ಪ್ರಕರಣದ ಆರೋಪಿಗೆ ಜಿಲ್ಲಾ ಪೊಲೀಸರು ಗುಂಡು ಹೊಡೆದು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪೊಲೀಸರ ಗುಂಡೇಟು ಬಲಗಾಲಿಗೆ ತಗುಲಿ ಗಾಯಗೊಂಡಿರುವ ಪ್ರಕರಣದ ಪ್ರಮುಖ ಆರೋಪಿ ಮಹೇಶ್ ತಳವಾರ್ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.**



ಇಟ್ಟಂಗಿಹಾಳ ಗ್ರಾಮದ ಸುಮಾರು 1 ಕಿಮೀ ದೂರದಲ್ಲಿ ಇಂದು ಮುಂಜಾನೆ 5.30 ರ ವೇಳೆ ಆರೋಪಿ ಮಹೇಶ್ ಅಡಗಿರುವ ಸಂಬಂಧ ಬಗ್ಗೆ ಚಡಚಣ ವೃತ್ತ ಸರ್ಕಲ್ ಇನ್ಸ್ ಪೆಕ್ಟರ್ ಪರಶುರಾಮ್ ಮನಗೂಳಿ ಅವರಿಗೆ ಮಾಹಿತಿ ಲಭಿಸಿದೆ. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಆರೋಪಿಯನ್ನು ಬಂಧಿಸಲು ಇನ್ಸ್ ಸ್ಪೆಕ್ಟರ್ ಮತ್ತು ಅವರ ಸಿಬ್ಬಂದಿಗಳಾದ ಶೇಖರ್ ಪವಾರ್, ವಿಜಯಕುಮಾರ್ ಬನಸೋಡೆ ಹಾಗೂ ಇನ್ನಿತರರೊಂದಿಗೆ ಸ್ಥಳಕ್ಕೆ ತೆರಳಿದ್ದಾರೆ. ಆ ಸಂದರ್ಭದಲ್ಲಿ ಪೊಲೀಸರನ್ನು ನೋಡಿದ ಆರೋಪಿ ಮಹೇಶ್ ಚಂದ್ರಕಾಂತ್ ಏಕಾಏಕಿ ಸಿಬ್ಬಂದಿಗಳ ಮೇಲೆ ಕಲ್ಲಿನಿಂದ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ. ಈ ವೇಳೆ ಎರಡು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಸಿದರೂ ಬಗ್ಗದ ಮಹೇಶ್ ಕಲ್ಲಿನ ದಾಳಿ ಮುಂದುವರೆಸಿದಾಗ ಆತ್ಮರಕ್ಷಣೆಗೆ ಚಡಚಣ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಪರಶುರಾಮ್ ಮನಗೂಳಿ ಮತ್ತೊಂದು ಗುಂಡು ಹಾರಿಸಿದ್ದು,ಅದು ಬಲಗಾಲಿಗೆ ತಗುಲಿ ಕುಸಿದು ಬಿದ್ದ ಮಹೇಶ್ ನನ್ನು ಬಂಧಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ವೇಳೆ ಚಡಚಣ ಠಾಣೆ ಸಿಬ್ಬಂದಿ ಶೇಖರ್ ಪವಾರ್, ವಿಜಯಕುಮಾರ್ ಬನಸೋಡೆಗೆ ಗಾಯಗಳಾಗಿವೆ. ಜಿಲ್ಲಾಸ್ಪತ್ರೆಯಲ್ಲಿ ಇಬ್ಬರು ಸಿಬ್ಬಂದಿಯನ್ನು ದಾಖಲಿಸಲಾಗಿದೆ.

## ರೈತರ ಬದುಕಿಗೆ ಸೂರ್ಯಕಾಂತಿ ಬೆಳೆ ಆಸರೆ : ಉತ್ತಮ ಇಳುವರಿ ಜೊತೆಗೆ ಲಾಭದ ನಿರೀಕ್ಷೆಯಲ್ಲಿ ಅನ್ನದಾತರು : ಎಲ್ಲೆಲ್ಲೂ ಸೂರ್ಯಕಾಂತಿ ಸೊಬಗು

❑ ನೈಜ್ಯ ದೆಸೆ ನ್ಯೂಸ್



**ಬಳ್ಳಾರಿ / ಕಂಪ್ಲಿ : ರೈತರ ಜೀವನಾಡಿ ತುಂಗಭದ್ರ ಜಲಾಶಯದ ಹೊಸ ಕ್ರಸ್ಟ್ ಗೇಟ್ ಅಳವಡಿಕೆ ಹಿನ್ನಲೆ ಎರಡನೇ ಬೆಳೆಗೆ ನೀರು ಕಡಿತಗೊಳಿಸಲಾಗಿತ್ತು. ಇದರಿಂದ ರೈತರ ಬದುಕು ಅತತಂತ್ರ ಎನ್ನುವ ಸಂದರ್ಭದಲ್ಲಿ ರೈತರು ಸೂರ್ಯನ ನೆನಪಲ್ಲೇ ಸೂರ್ಯಕಾಂತಿ ಮೊರೆ ಹೋಗುವ ಮೂಲಕ ಇಂದಿನ ದಿನಮಾನದಲ್ಲಿ ರೈತರ ಬದುಕಿಗೆ ಸೂರ್ಯಕಾಂತಿ ಬೆಳೆ ಆಸರೆಯಾಗಿರುವ ಜೊತೆಗೆ ಉತ್ತಮ ಇಳುವರಿಯೊಂದಿಗೆ ರೈತರ ಆರ್ಥಿಕತೆ ವೃದ್ಧಿಗೆ ಕಾರಣವಾಗಿದೆ.**

ತಾಲ್ಲೂಕಿನ ನೆಲ್ಲುಡಿ, ಶಾಂತಿನಗರ, ಎಮ್ಮಿಗನೂರು ಭಾಗದಲ್ಲಿ ಎಣ್ಣೆ ಕಾಳು ಬೆಳೆಯಾದ ಸೂರ್ಯಕಾಂತಿ ಫಸಲು ನಳ ನಳಿಸುತ್ತಿದ್ದು, ಅನ್ನದಾತರ ಮುಖದಲ್ಲಿ ಸಂತಸಮೂಡಿದೆ. ಎರಡನೇ ಬೆಳೆಗೆ ನೀರಿಲ್ಲದ್ದರಿಂದ ಕೊಳವೆಬಾವಿ ನೀರು,ತುಂಗಭದ್ರಾ ಬಲದಂಡೆ ಕೆಳಮಟ್ಟದ ಬಿಟ್ಟ ನೀರಿನಿಂದ ರೈತರು ಸೂರ್ಯಕಾಂತಿ ಬೆಳೆದಿದ್ದು,ಇನ್ನು ಕೆಲವೇ ದಿನಗಳಲ್ಲಿ ಕಟಾವಿಗೆ ಬರಲಿದೆ. ಈ ಭಾಗದಲ್ಲಿ ಸುಮಾರು 1250 ಎಕರೆಗೂ ಅಧಿಕ ಪ್ರದೇಶದಲ್ಲಿ ಸೂರ್ಯಕಾಂತಿ ಬೆಳೆಯಲಾಗಿದೆ. ಮುಂಗಾರು ಹಂಗಾಮಿನಲ್ಲಿ ರೈತರು ಭತ್ತವನ್ನು ಬೆಳೆದಿದ್ದರು. ಜೀವನಾಡಿ ತುಂಗಭದ್ರಾ ಜಲಾಶಯದ ಕ್ರೆಸ್ಟ್ ಗೇಟ್ ಕಟ್ಟಾಗಿ, ಎಲ್ಲಾ ಕ್ರೆಸ್ಟ್ ಗೇಟಗಳನ್ನು ಅಳವಡಿಕೆ ಹಿನ್ನೆಲೆಯಲ್ಲಿ ಎರಡನೇ ಬೆಳೆಗೆ ಕಾಲುವೆಗಳಿಗೆ ನೀರನ್ನು ಹರಿಸದ ಕಾರಣ ಡಿಸೆಂಬರಿನಲ್ಲಿ ಕಡಲೆ ಬಿತ್ತನೆ ಮಾಡಿದ್ದರು. ಇತ್ತೀಚೆಗೆ ಕೆಳಮಟ್ಟದ ಕಾಲುವೆಗೆ ನೀರು ಬಿಟ್ಟಾಗ ರೈತರು ಸೂರ್ಯಕಾಂತಿ ಬೆಳೆದಿದ್ದಾರೆ. ಸೂರ್ಯಕಾಂತಿ ಕಟಾವಿನ ಬಳಿಕ ರೈತರು ಮಾಗಿ ಉಳುಮೆ ಮಾಡುತ್ತಾರೆ. ಯಾಕೆಂದರೆ ಸೂರ್ಯಕಾಂತಿ ಬೆಳೆಯ ಎಲೆಗಳು ಮಣ್ಣಿನಲ್ಲಿ ಸೇರುವುದರಿಂದ ಮಣ್ಣಿನ ಫಲವತ್ತತೆ ಅಧಿಕವಾಗಿ, ಮುಂಗಾರು ಹಂಗಾಮಿನ ಭತ್ತದ ಬೆಳೆಗೆ ಅನುಕೂಲವಾಗಲಿದೆ. ಸೂರ್ಯಕಾಂತಿ ಬೀಜಕ್ಕೆ ನಾಲ್ಕು ಸಾವಿರ ರೂ, ಬಿತ್ತನೆ ಹಾಗೂ ಉಳುಮೆ, ಭೂಮಿಯಲ್ಲಿ ಸ್ವಚ್ಚತೆ ಮಾಡಲು ಮತ್ತು ಸೂರ್ಯಕಾಂತಿ ಬೆಳೆಯ ಕಟಾವು ಸೇರಿದಂತೆ ಒಟ್ಟು 20 ಸಾವಿರ ಖರ್ಚು ಮಾಡಿದ್ದಾರೆ. ಎಕರೆಗೆ 5 ರಿಂದ 10 ಕ್ವಿಂಟಲ್ ಇಳುವರಿ ಬರುವ ಸಾಧ್ಯತೆ ಇದೆ.ಕನಿಷ್ಠ 8 ಕ್ವಿಂಟಲ್ ಇಲುವರಿ ಬಂದಲ್ಲಿ ಸೂರ್ಯಕಾಂತಿ ಬೆಳೆ ರೈತರಿಗೆ ಲಾಭವನ್ನು ತಂದುಕೊಡಲಿದೆ.

**ಮಣ್ಣಿನ ಫಲವತ್ತೆ ಹೆಚ್ಚಾಗಲು ಸೂರ್ಯಕಾಂತಿ ಬೆಳೆಯಿಂದ ಅನುಕೂಲವಾಗಲಿದೆ. ಜೊತೆಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಆದಾಯ ಸಿಗಲಿದೆ. ರೈತ ಸಂಪರ್ಕ ಕೇಂದ್ರದಲ್ಲಿ ರಿಯಾಯಿತಿದರದಲ್ಲಿ ಸೂರ್ಯಕಾಂತಿ ಬಿತ್ತನೆ ಬೀಜಗಳು ಲಭ್ಯ ಇವೆ.**
**ಟಿ.ಜ್ಯೋತಿ. ಪ್ರಭಾರ ಕೃಷಿ ಅಧಿಕಾರಿ. ರೈತ ಸಂಪರ್ಕ ಕೇಂದ್ರ. ಕಂಪ್ಲಿ.**

**ಎರಡನೇ ಬೆಳೆ ಇಲ್ಲದ ರೈತರು ಕೈಕಟ್ಟಿ ಕುಳಿತುಕೊಂಡಿದ್ದರು. ಆದರೆ, ಅಲ್ಪಸ್ವಲ್ಪ ಕಾಲುವೆ ನೀರು ಮತ್ತು ಮಳೆರಾಯನ ಕೃಪೆಗೆ ಸೂರ್ಯಕಾಂತಿ ಬೆಳೆ ಬೆಳೆದು, ಈಗ ಕಟಾವಿನ ಹಂತಕ್ಕೆ ಬಂದಿರುವುದು ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಈಗಾಗಳೇ ಸೂರ್ಯಕಾಂತಿ ಉತ್ತಮ ಇಳುವರಿ ಬಿಡುವ ನಿರೀಕ್ಷೆಯೊಂದಿಗೆ ರೈತರ ಅದಾಯ ದ್ವಿಗುಣವಾಗುವ ಸಾಧ್ಯತೆ ಇದೆ. ಇದರಿಂದ ಎರಡನೇ ಬೆಳೆಯಿಂದ ದೂರವಿದ್ದ ಈ ಭಾಗದ ರೈತರ ಬದುಕು ಕೈಹಿಡಿದಂತಾಗಿದೆ.**
**ಬಸವರಾಜ, ರೈತ, ನೆಲ್ಲುಡಿ**

## ಗರ್ಭಿಣಿ ಮಹಿಳೆ ಸಾವಿಗೆ ಕಾರಣರಾದ ಡಾ. ಪವನ್ ಕುಮಾರ್



❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಗರ್ಭಿಣಿ ಮಹಿಳೆ ಸಾವಿಗೆ ಕಾರಣರಾದ ಡಾ. ಪವನ್ ಕುಮಾರ್ ಹಾಗೂ ನರ್ಸ್ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಿ ಸೇವೆಯಿಂದ ಅಮಾನತ್ತು ಮಾಡಬೇಕೆಂದು ದಲಿತ ಸೇನೆ ಮಹಿಳಾ ಘಟಕ ಜಿಲ್ಲಾ ಅಧ್ಯಕ್ಷೆ ಜಯಶ್ರೀ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಧಿಕಾರಿ ಡಾ ರುದ್ರಗೌಡ ಪಾಟೀಲ್ ಇವರಿಗೆ ಮನವಿಯನ್ನು ಸಲ್ಲಿಸಿ ಮಾತನಾಡಿದ ಅವರು**

ಹೆರಿಗೆ ನೋವು ಕಾಣಿಸಿಕೊಂಡಿರುವ ಕಾರಣ ಪಟ್ಟಣದ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದು ತದನಂತರದಲ್ಲಿ ಡಾ: ಪವನಕುಮಾರ ರವರು ತಪಾಸಣೆ ಮಾಡಿ ಇದು ಸರಳ ಹೆರಿಗೆ ಆಗಲ್ಲಾ ಸಿಜರಿನ್ ಮಾಡಬೇಕೆಂದು ಹೇಳಿದ್ದು ಇದಕ್ಕೆ ವೃತ ಕಾವೇರಿ ಕುಟುಂಬಸ್ಥರು ಒಪ್ಪಿಕೊಂಡರು ನಂತರದಲ್ಲಿ ಸೀಜರಿನ್ ಆಪರೇಷನ್ ಮಾಡುವ ಸಂದರ್ಭದಲ್ಲಿ ಡಾ. ಪವನ್ ಕುಮಾರ್ ನಿರ್ಲಕ್ಷತದಿಂದ ಕಿಡ್ನಿಗೆ ಸಂಬಂದಿಸಿದ ನರಗಳನ್ನು ಕಟ್ ಮಾಡಿರುತ್ತಾರೆ.

ರಕ್ತಸ್ರಾವ ನಿಲ್ಲದ ಕಾರಣ ಎರಡು ಬಾಟಲಿಗಳು ರಕ್ತ ಬೇಕಾಗುತ್ತದೆ ಎಂದು ಹೇಳಿದ್ದು ಎರಡು ಬಾಟಲಿ ರಕ್ತ ಗರ್ಭಿಣಿ ಮಹಿಳೆಗೆ ಏರಿಸಿದರು. ಅದರೂ ಸಹ ರಕ್ತಸ್ರಾವ ನಿಲ್ಲದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರು ಜಿಲ್ಲಾ ರಿಮ್ಸ್ ಆಸ್ಪತ್ರೆಗೆ ಸಿಫಾರಸ್ಸು ಮಾಡಿರುತ್ತಾರೆ. ಅಲ್ಲಿ ಸಹ ನಾಲ್ಕು ಬಾಟಲಿಗಳು ರಕ್ತ ಬಾಣತಿಗೆ ಹಾಕಬೇಕೆಂದು ಹೇಳಿದ್ದು ನಾಲ್ಕು ಬಾಟಲಿ ರಕ್ತವನ್ನು ಬಾಣಂತಿಗೆ ಏರಿಸುತ್ತಾರೆ. ಆದರೂ ಸಹ ರಕ್ತಸ್ರಾವ ನಿಲ್ಲದೇ ಗರ್ಭಿಣಿ ಮಹಿಳೆ ಶ್ರೀಮತಿ ಕಾವೇರಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾಳೆ. ಬಡವರ ಜೀವಗಳ ಜೊತೆ ಚೆಲ್ಲಾಟ ಹಾಡಿದ ಸರ್ಕಾರಿ ಆಸ್ಪತ್ರೆಯ ಡಾ. ಪವನ ಕುಮಾರ ಮತ್ತು ನರ್ಸ್ ಗಳ ನಿರ್ಲಕ್ಷ್ಯದಿಂದ ಗರ್ಭಿಣಿ ಮಹಿಳೆ ಮೃತಪಟ್ಟಿರುತ್ತಾಳೆ. ಕಾರಣ ಇವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಿ ಇವರಿಗೆ ನ್ಯಾಯ ಒದಗಿಸಿಕೊಡಬೇಕು.

ಇಂತಹ ಪ್ರಕರಣಗಳು ದಿನ ನಿತ್ಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಂಡು ಬಂದಿರುತ್ತವೆ. ಈ ವಿಷಯ ಮೇಲಾಧಿಕಾರಿಗಳ ಗಮನಕ್ಕೆ ತಂದು ಉನ್ನತ ಮಟ್ಟದ ನುರಿತ ತಜ್ಞರಿಂದ ತನಿಖೆ ಮಾಡಿ ಮೃತ ಕುಟುಂಬಗಳಿಗೆ 50 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿ ಆ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು ಅವರುಗಳ ವಿರುದ್ಧ ಕ್ರಮ ಜರುಗಿಸದೇ ಇದ್ದಲ್ಲಿ ಮೃತ ಕುಟುಂಬಸ್ಥರೊಂದಿಗೆ ಆಸ್ಪತ್ರೆ ಮುಂದೆ ಹೋರಾಟ ಮಾಡಬೇಕಾಗುತ್ತದೆ ಎಂದು ಒತ್ತಾಯಿಸಿದರು .

## ಕಚೇರಿಗಳಲ್ಲಿ ಜನಸ್ನೇಹಿಯಾಗಿ ಕೆಲಸ ಮಾಡಿ: ಬೀಳಗಿ ಸಲಹೆ

# ಅಹವಾಲು ಸೀಕಾರ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್



**ಬಳ್ಳಾರಿ / ಕುರುಗೋಡು : ಸರ್ಕಾರ ನಿಮಗೆ ವಹಿಸಿದ ಇಲಾಖೆಯ ಕೆಲಸ ವನ್ನು ನಿಷ್ಠೆಯಿಂದ ನಿರ್ವಹಿಸಬೇಕು ಎಂದು ಲೋಕಾಯುಕ್ತ ಡಿವೈಎಸ್ಪಿ ಎಸ್.ಎಸ್. ಬೀಳಗಿ ಸಲಹೆ ನೀಡಿದರು.**

ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ಜರುಗಿದ ಸಾರ್ವಜನಿಕ ಕುಂದುಕೊರತೆ ಮತ್ತು ಅಹವಾಲು ಸಭೆಯಲ್ಲಿ ಅವರು ಮಾತನಾಡಿದರು. ದಾಖಲೆಗಳ ಕೊರತೆ ಅಥವಾ ತಪ್ಪು ಕಂಡುಬಂದರೆ ಕೂಡಲೇ ಅವರಿಗೆ ಮಾಹಿತಿ ನೀಡಿ. ವಿನಾಕಾರಣ ಕಚೇ ರಿಗೆ ಅಲೆದಾಡಿಸಬೇಡಿ. ಸಾರ್ವಜನಿಕ ರಿಂದ ದೂರುಗಳು ಬಂದರೆ ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಾರ್ವಜನಿಕರಿಂದ ದೂರುಗಳು ಬಂದರೆ ದಿಢೀರ್ ದಾಳಿನಡೆಸಿ ಪ್ರಕ ರಣ ದಾಖಲಿಸಬೇಕಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಸಲಹೆ ನೀಡಿದರು. ಕಳೆದ ಎಂಟು ತಿಂಗಳಿಂದ ತಾಲ್ಲೂಕಿನಿಂದ ಯಾವುದೇ ಗಮನಾರ್ಹ ದೂರುಗಳು ಬಂದಿಲ್ಲ. ಇದರಿಂದ ತಿಳಿಯುತ್ತದೆ. ತಾಲ್ಲೂಕಿನಲ್ಲಿ ಎಲ್ಲ ಇಲಾಖೆಗಳ ಅಧಿಕಾರಿ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಕಂದಾಯ, ಸರ್ವೆ,ಲೊಕೋಪ ಯೋಗಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದ ಒಟ್ಟು 8 ಅರ್ಜಿಗಳು ಸಲ್ಲಿಕೆಯಾದವು. ಗವಿಯಪ್ಪ, ರೇಣುಕಾ ಚಾರ್ಯ ಸ್ವಾಮಿ, ಪಿಎಸ್‌ಐ ಕರಿಯಮ್ಮ ಇದ್ದರು.

ವರದಿ : ಜಿಲಾನಸಾಬ್ ಬಡಿಗೇರ್

## ಪಲ್ಸ್ ಪೋಲಿಯೋ ಜವಾಬ್ದಾರಿ ಅಚ್ಚುಕಟ್ಟಾಗಿ ನಿಭಾಯಿಸಿ: ಜಿಲ್ಲಾಧಿಕಾರಿ ಪೂವಿತಾ

❑ ನೈಜ್ಯ ದೆಸೆ ನ್ಯೂಸ್



**ರಾಯಚೂರು ಜೂನ್ 22 (ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಜೂನ್ 28 ರಂದು ಜರುಗುವ ಹುಟ್ಟಿನಿಂದ 05 ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕಲಾಗುವ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ವಿವಿಧ ಇಲಾಖೆಗಳಿಗೆ ನೀಡಿರುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ ಅಭಿಯಾನದ ಯಶಸ್ವಿಗೆ ಶ್ರಮಿಸಬೇಕೆಂದು ಜಿಲ್ಲಾಧಿಕಾರಿಗಳು ಪೂವಿತಾ ಎಸ್. ಅವರು ಹೇಳಿದರು.**

ಜೂನ್ 22ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ರಾಯಚೂರು, ಸಿಂಧನೂರು, ನಗರ ಹಾಗೂ ಮಾನವಿ, ಲಿಂಗಸೂಗೂರು, ದೇವದುರ್ಗ ಪಟ್ಟಣಗಳಲ್ಲಿ ವಿವಿಧ ಸ್ಥಳಗಳಲ್ಲಿ ಅನುಷ್ಠಾನ ಮಾಡುವ ಪೋಲಿಯೋ ಬೂತ್‌ಗಳ ಮಾಹಿತಿ ಪಡೆದು, ಈಗಾಗಲೆ ಜಿಲ್ಲೆಯಲ್ಲಿ ಒಟ್ಟು 2,60,002 ಮಕ್ಕಳನ್ನು ಗುರುತಿಸಲಾಗಿದ್ದು, ಮಕ್ಕಳಿಗೆ ಲಸಿಕೆ ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1,132 ಬೂತ್‌ಗಳು ಹಾಗೂ ಸಂತೆ, ಜಾತ್ರೆ, ಮಾರುಕಟ್ಟೆ, ರೈಲು ನಿಲ್ದಾಣ, ಬಸ್ ನಿಲ್ದಾಣ, ಜನ ವಸತಿ ಪ್ರದೇಶ ಸೇರಿದಂತೆ ಮುಂತಾದವುಗಳಲ್ಲಿ ಲಸಿಕೆ ಹಾಕಲು 53 ಟ್ರಾನ್ಸಿಟ್ ಬೂತ್‌ಗಳು ಹಾಗೂ ವಲಸೆ ಪ್ರದೇಶ, ಕಟ್ಟಡ ಕಾಮಗಾರಿ, ಇಟ್ಟಿಗೆ ಬಟ್ಟಿ, ಕಬ್ಬು ಕಡೆಯುವ ಜಾಗೆ, ಕುರಿಹಟ್ಟಿ, ಕೊಳಚೆ ಪ್ರದೇಶ, ತೋಟದ ಮನೆ, ಮುಂತಾದ ಸ್ಥಳಗಳಲ್ಲಿರುವ ಮಕ್ಕಳಿಗೆ ಲಸಿಕೆ ಹಾಕಲು 33 ಸಂಚಾರಿ ತಂಡ ಹಾಗೂ 248 ಮೇಲ್ವಿಚಾರಕರನ್ನು ನೇಮಿಸಲಾಗಿದ್ದು ನಗರದ ಪ್ರದೇಶದ ಜನತೆಯು ತಮ್ಮ ಮೊಬೈಲ್‌ಗಳ ಸಹಾಯದಿಂದ ಪೂರ್ವದಲ್ಲಿಯೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಲು ಎಲ್ಲ ಗ್ರೂಪ್‌ಗಳಿಗೆ ಶೇರ್ ಮಾಡಲು ತಿಳಿಸಿ ನಿಗದಿತ ಗುರಿ ಸಾಧಿಸಲು ಸೂಚಿಸಿದರು.

ಪಲ್ಸ್ ಪೋಲಿಯೋ ಕಾರ್ಯದಲ್ಲಿ ಸಾಲು ರಜೆಗಳ ಹಿನ್ನಲೆ ಮುಂಚಿತವಾಗಿ ಬೂತ್‌ಗಳನ್ನು ಹೊಂದಿದ ಶಾಲೆ, ಅಂಗನವಾಡಿ ಕೇಂದ್ರಗಳನ್ನು ಸ್ವಚ್ಚಗೊಳಿಸಿ ಅಗತ್ಯ ಕುಡಿಯುವ ನೀರಿನ ವ್ಯವಸ್ಥೆ, ಪಾಲಕರಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ಕಲ್ಪಿಸಲು ಯಾವುದೆ ನ್ಯೂನ್ಯತೆಯಿಲ್ಲದೆ ಸಿದ್ದಪಡಿಸಲು ಸೂಚಿಸಿದರು. ಜೂನ್ 23, 24 ಹಾಗೂ 25ರ ಮೂರು ದಿನಗಳ ಕಾಲ ಪ್ರೀ ಆ?ಯಕ್ಟಿವಿಟಿ ಮೂಲಕ ಅಂಗನವಾಡಿ, ಖಾಸಗಿ ಮೊಂಟೇಸ್ರಿಗಳಲ್ಲಿ ಎಲ್ಲ 05 ವರ್ಷದ ಮಕ್ಕಳಿಗೆ ಲಸಿಕೆ ಲಸಿಕೆ ಹಾಕಲು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಪೂರ್ವ ನಿಗದಿಯಂತೆ ಎಲ್ಲ ಆರೋಗ್ಯ ಕೇಂದ್ರಗಳಿಗೆ ಲಸಿಕೆ ಸಂರಕ್ಷಿಸಲು ಸತತವಾಗಿ ವಿದ್ಯುತ್ ಪೂರೈಕೆ, ಲಸಿಕೆ ಸಾಗಿಸಲು ವಾಹನಗಳ ಒದಗಿಸುವಿಕೆ, ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಜಿಂಗಲ್ಸ್ ಹಾಕಲು ಎಲ್ಲ ಸ್ಥಳಿಯ ಸಂಸ್ಥೆಯವರಿಗೆ. ಎರಡು ದಿನಗಳ ಕಾಲ ಸ್ಥಳೀಯ ಹಂತದಲ್ಲಿ ಜಾಥಾ ಹಮ್ಮಿಕೊಳ್ಳಲು ಶಿಕ್ಷಣ ಇಲಾಖೆಯವರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲೆಯಾದ್ಯಂತ ಈಗಿನಿಂದಲೇ ಮನೆ ಭೇಟಿಯ ಮೂಲಕ ಪಾಲಕರಿಗೆ ಮಾಹಿತಿ ನೀಡಬೇಕು. ಪತ್ರಿಕೆಗಳಲ್ಲಿ ಪ್ರಚಾರ, ಮೈಕಿಂಗ್, ಟಾಂ ಟಾಂ, ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಪೋಸ್ಟರ್ ಬಿಡುಗಡೆ: ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅಂಗವಾಗಿ ಪಲ್ಸ್ ಪೋಲಿಯೋ ಪ್ರಚಾರದ ಪೋಸ್ಟರ್ ಹಾಗೂ ಲಸಿಕಾ ಕೇಂದ್ರದ ಕ್ಯೂ ಆರ್ ಕೋಡ್‌ನ್ನು ವಿವಿಧ ಗಣ್ಯರಿಂದ ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ರಾಯಚೂರು ನಗರಾಭಿವೃದ್ಧಿ ಯೋಜನಾ ನಿರ್ದೇಶಕ ತಿಮ್ಮಪ್ಪ ಬಿರಾದರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು, ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಧಿಕಾರಿ ಡಾ.ನಂದಿತಾ ಎಮ್. ಎನ್., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ಆರತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಶಿವಮಾನ್ಯಪ್ಪ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101